ಬಂಟರ ಸಂಘ ಬೆಂಗಳೂರು
BUNTS' SANGHA BANGALORE
www.buntsanghablr.com

# ಸ್ನೇಹ ಚಿಂತನ

ಮಾಸ ಪತ್ರಿಕೆ


ಫೆಬ್ರವರಿ 2021
ಸಂಪುಟ 17, ಸಂಚಿಕೆ 01
ಸಂಚಿಕೆ ಬೆಲೆ ರೂ. 1/-



324, Chord Road
Vijayanagara
Bengaluru - 560 040.
Ph: 080 2339 9323, 2339 9635
E: info@buntsanghablr.com


## ಕಾಯಕ ಯೋಗಿಗೆ ನಮನ



ದಿ| ಡಾ| ಆರ್.ಎನ್. ಶೆಟ್ಟಿ

# CONGRATULATIONS



## Manank Shetty

**Manank Shetty student of Christ College, Koramangala has scored**

100 in Mathematics, 100 in Accountancy,
99 in Business Studies, 96 in Economics

In the Pre-University Board Examination in Commerce Stream (CAME)

Manak Shetty of Dr. Sandeep Shetty and Dr. Shruthi Shetty
Grand Son of Mr. Irmady Jayaprasad Shetty
and Mrs. Sujaya J. Shetty, Bangalore
And
Mr. Shridhar Shenava and Mrs. Jyothi S. Shenava, Kaup

ADVT.

# ಸ್ನೇಹ ಚಿಂತನೆ


*Monthly Magazine Published by*

**BUNTS' SANGHA BANGALORE**

**VOL. 17** | **FEBRUARY 2021** | **ISSUE 01**



**ಸಾಹಿತ್ಯ–ಪ್ರಕಾಶನ ಸಮಿತಿ**

ಚೇರ್‌ಪರ್ಸನ್ ಮತ್ತು ಗೌ॥ ಸಂಪಾದಕರು :
**ಶ್ರೀ ಎಂ. ಮುರಲೀಧರ ಹೆಗ್ಡೆ**

ಸಲಹಾ ಮಂಡಳಿ :
**ಶ್ರೀ ಎ. ಗಿರೀಶ್ ರೈ**
**ಶ್ರೀ ಸತ್ಯಾನಂದ ಮೇಲಾಂಟ ಎನ್.**
**ಶ್ರೀ ಪ್ರಕಾಶ್ ಶೆಟ್ಟಿ**

ಸಂಪಾದಕ ಮಂಡಳಿ :
**ಶ್ರೀಮತಿ ಸ್ಮಿತಾ ಬಲ್ಲಾಳ್**
**ಶ್ರೀಮತಿ ನಿರ್ಮಲಾ ಸಿ. ರೈ**
**ಕುಮಾರಿ ಶಾಲ್ಮಲೀ ಸುರೇಶ್**
**ಶ್ರೀಮತಿ ಶ್ಯಾಮಲಾ ಶೆಟ್ಟಿ**
**ಶ್ರೀಮತಿ ಅನುಷಾ ಶೆಟ್ಟಿ**

ಪೋಷಕ ಸದಸ್ಯರು :
**ಶ್ರೀಮತಿ ಮನೋರಮ ಚೌಟ**
**ಶ್ರೀಮತಿ ವೇದ ಎಸ್. ಶೆಟ್ಟಿ**
**ಶ್ರೀ ಬಿ. ಕುಸುಮಾಕರ ಶೆಟ್ಟಿ**
**ಶ್ರೀ ಆರ್.ಎಸ್. ಶೆಟ್ಟಿ**
**ಶ್ರೀಮತಿ ವಸಂತಿ ಪಿ. ಶೆಟ್ಟಿ**
**ಶ್ರೀ ಪ್ರಕಾಶ್ ಶೆಟ್ಟಿ**
**ಶ್ರೀ ಎ.ಜೆ. ಶೆಟ್ಟಿ**
**ಶ್ರೀಮತಿ ಗೀತ ಭಗವಾನ್‌ದಾಸ್ ರೈ**
**ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ**
**ಶ್ರೀ ಶ್ರೀನಿವಾಸ ಸೂಡ**

ಪ್ರಕಾಶಕರು :
**ಮಧುಕರ ಎಂ. ಶೆಟ್ಟಿ**



ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ.

**– ಸಂಪಾದಕ ಮಂಡಳಿ**


## ಒಳ ಪುಟಗಳಲ್ಲಿ...


| | | **ಪುಟ** |
|---|---|---|
| 1. | ಸಂಪಾದಕೀಯ | 2 |
| 2. | ಅಧ್ಯಕ್ಷರ ಮಾತು | 3 |
| 3. | ಗೌರವ ಕಾರ್ಯದರ್ಶಿಗಳ ವರದಿ | 4 |
| 4. | ಕಾಯಕ ಯೋಗಿ – ಡಾ॥ ಆರ್.ಎನ್.ಎಸ್. ಅಸ್ತಂಗತ | 5 |
| 5. | Dr. R.N. Shetty with exemplary grace, pragematic, demeanour, idealistic outlook and hard work – a real Margadarshak. | 8 |
| 6. | ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿ ಬಂಟ್ಸ್ ಜಂಟ್ಸ್ ಹಾಸ್ಟೆಲ್ ಉದ್ಘಾಟನೆ | 11 |
| 7. | ಸಂಘದ ವಿವಿಧ ಉಪಸಮಿತಿಗಳ ವತಿಯಿಂದ ನಡೆದ ವೆಬಿನಾರ್‌ಗಳು | 15 |
| 8. | ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ | 16 |
| 9. | ಡಾ॥ ಆರ್.ಎನ್. ಶೆಟ್ಟಿಯವರಿಗೆ ನುಡಿ ನಮನ | 18 |
| 10. | Academic Excellence | 19 |
| 11. | ಆರ್.ಟಿ. ಭಂಡಾರಿ ಸ್ಮಾರಕ ಸಾಂಸ್ಕೃತಿಕ ಮತ್ತು ಕ್ರೀಡಾ ದಿನಾಚರಣೆ | 30 |
| 12. | ಮಹಿಳಾ ವಿಭಾಗ – ದಸರಾ ಆಚರಣೆ | 31 |
| 13. | ವರಸಿದ್ಧಿ ವಿನಾಯಕ ಮಂದಿರದ ವಾರ್ಷಿಕೋತ್ಸವ | 32 |
| 14. | Matrimonial Services | 44 |


**ಮುಖಪುಟ**

**ಕಾಯಕ ಯೋಗಿ**

**ದಿ॥ ಡಾ॥ ಆರ್.ಎನ್. ಶೆಟ್ಟಿಯವರಿಗೆ ನಮನ**

# ಸಂಪಾದಕೀಯ



ಪ್ರಿಯ ಸದಸ್ಯ ಬಾಂಧವರೇ,

ಆರು ತಿಂಗಳ ಸುದೀರ್ಘ ಅವಧಿಯ ನಂತರ ನಿಮ್ಮೆಲ್ಲರ ಮುಂದೆ ಪುನಃ ಬರುತ್ತಿದ್ದೇವೆ–ಸ್ನೇಹ ಚಿಂತನೆಯೊಂದಿಗೆ. ಸಾಮಾನ್ಯವಾಗಿ ನಾವು ಯಾರನ್ನಾದರೂ ಭೇಟಿಯಾದರೆ ಹೇಗಿದ್ದೀರಿ? ಮನೆಯಲ್ಲೆಲ್ಲಾ ಚೆನ್ನಾಗಿದ್ದಾರಾ? ಅಪ್ಪ, ಅಮ್ಮ, ಮಕ್ಕಳು ಹೀಗೆ ಕೇಳುವ ಪರಿ ಹಿಂದೆಂದೋ ಇತ್ತು ಅನಿಸುತ್ತಿದೆ. ಈಗ ಏನಿದ್ದರೂ ಕೋವಿಡ್‌ನ ವಿಷಯ. ಮಾಸ್ಕ್, ಸಾಮಾಜಿಕ ಅಂತರ, ಕುಡಿಯಲು ಕಷಾಯ, ಇಮ್ಯೂನಿಟಿ ಬೂಸ್ಟರ್, ಆಸ್ಪತ್ರೆ, ಟೆಸ್ಟ್, ನೆಗೆಟಿವ್/ಪಾಸಿಟಿವ್ ಇತ್ಯಾದಿ. ಇದು ಎಲ್ಲರಿಗೂ ಬಾಯಿಪಾಠ ಆದಂತಿದೆ. ಬಿಸಿನೆಸ್ ಹೋಯ್ತು, ಆಫೀಸ್ ಬಾಗಿಲು, ಮನೆಯಿಂದ ಕೆಲಸ, ಸಂಬಳ ಕಟ್, ಎಷ್ಟೋ ಜನ ಊರಿಗೆ ವಾಪಾಸ್ ಇದೇ ಎಲ್ಲಾ ಬ್ರೇಕಿಂಗ್ ನ್ಯೂಸ್. ಎಂತಹ ದುರದೃಷ್ಟಕರ ವರ್ಷವನ್ನು ನಾವು ಕಳೆದೆವು. 2021ನ್ನು ಏನೋ ನಾವು ಸ್ವಾಗತಿಸಿದ್ದೇವೆ. ಆದರೆ ಕೋವಿಡ್ ಭೂತ ಇನ್ನೂ ನಮ್ಮ ಬೆನ್ನು ಬಿಟ್ಟಿಲ್ಲ. ಮನುಷ್ಯನಲ್ಲಿ ಎಷ್ಟೇ ಹಣವಿರಲಿ, ಅಂತಸ್ತು ಇರಲಿ, ಕಾಲದ ಕರೆಗೆ ನಾವು ಒಪ್ಪಲೇಬೇಕು. ನಾನು, ನನ್ನದು ಎಲ್ಲಾ ಎಲ್ಲಿಗೆ ಹೋಯಿತು ಈಗ? ಇದೇ ನಮಗೆ 2020ರಲ್ಲಿ ದೊರೆತ ಅದ್ಭುತವಾದ, ಅಮೂಲ್ಯವಾದ ಪಾಠ. ಕೋವಿಡ್ ಒಂದು ನೆಪ ಮಾತ್ರ, ಭಗವಂತ ನಮಗೆ ಪಾಠ ಕಲಿಸಲು ತಯಾರು ಮಾಡಿದ ಸಿಲೇಬಸ್ ಅಷ್ಟೇ. ಇನ್ನಾದರೂ ನಾವು ನಮ್ಮ ನಮ್ಮ ಮುಂದಿನ ಪೀಳಿಗೆಯ ಬರುವ ದಿನಗಳ ಬಗ್ಗೆ ಯೋಚಿಸಬೇಕು. ನಮ್ಮ ಮಾತನಾಡುವ ಪರಿ, ದುಂದು ವೆಚ್ಚ, ಎಲ್ಲರಿಗೂ ಹೆಚ್ಚಾದ ಆಸೆ ಆಕಾಂಕ್ಷೆಗಳು, ಯಾರದ್ದೋ ಅನುಕರಣೆ, ಬೇರೆ ಬೇರೆ ಸಂಸ್ಕೃತಿ ಇದೆಲ್ಲಾ ಬಿಟ್ಟು ನಮ್ಮ ಸುಂದರ, ಅತ್ಯಮೂಲ್ಯವಾದ ಸಂಸ್ಕೃತಿ, ಸಂಸ್ಕಾರಗಳನ್ನು ಪುನಃ ನೆನಪಿಸಿಕೊಂಡು ನಾವು ಅದನ್ನು ಅನುಸರಿಸುವುದಲ್ಲದೇ, ನಮ್ಮ ಮುಂದಿನ ಪೀಳಿಗೆಗೂ ಕಲಿಸಬೇಕು. ಡಿವಿಜಿಯವರು ಹೇಳಿದಂತೆ ಎಲ್ಲರೊಳಗೊಂದಾಗ ಬೇಕು. ಮೇಲು ಕೀಳೆನ್ನದೆ, ಬಡವ ಬಲ್ಲಿದನ್ನೆನ್ನದೇ, ಜಾತಿ ಮತಗಳನ್ನು ಮೀರಿ, ಯಾರಿಗೂ ಕೆಟ್ಟದನ್ನು ಬಯಸದೇ ಜೀವನ ಸಾಗಿಸುವ ಶಪಥ ಮಾಡುವ ಕಾಲ ಬಂದೊದಗಿದೆ. ಇದೇ ನಮ್ಮ 2021ರ ರಿಸೊಲ್ಯೂಷನ್ ಆಗಬೇಕು.

ಈ ನಮ್ಮ ಕಷ್ಟಕರವಾದ ಕಾಲದಲ್ಲಿ ಒಂದು ಸಂತೋಷದ ವಿಷಯವೆಂದರೆ ನಮ್ಮ ಬೆಂಗಳೂರು ಬಂಟರ ಸಂಘದಲ್ಲಿ ನಡೆದ ಹಲವಾರು ಕೆಲಸಗಳು, ಕಷ್ಟದಲ್ಲಿದ್ದ ಅನೇಕ ನಮ್ಮ ಸಮುದಾಯದವರಿಗೆ ಸಹಾಯಹಸ್ತ ನೀಡುವ ಕೆಲಸ–ದಿನಸಿ ಕಿಟ್, ವಿದ್ಯಾರ್ಥಿಗಳಿಗೆ ಮೊಬೈಲ್ ಫೋನ್‌ಗಳು, ಬಂಟ್ಸ್ ಜೆಂಟ್ಸ್ ಹಾಸ್ಟೆಲ್, ಊರಲ್ಲಿ ಸಿಲುಕಿಕೊಂಡವರನ್ನು ಬೆಂಗಳೂರಿಗೆ ಕರೆತರುವುದಾಗಲೀ, ಆರೋಗ್ಯ ಸಮಸ್ಯೆ ಇದ್ದವರಿಗೆ ಸಹಾಯ, ಸ್ಕಾಲರ್‌ಶಿಪ್‌ಗಳು, ವಿದ್ಯಾರ್ಥಿಗಳಿಗೆ ಬಡ್ಡಿ ರಹಿತ ಸಾಲ ಹೀಗೆ ಹತ್ತಾರು ಕೆಲಸಗಳಲ್ಲಿ ನಮ್ಮ ಬಂಟ ಸಮಾಜದ ಬಾಂಧವರು ಅನೇಕರು ಕೈಜೋಡಿಸಿ ನಮ್ಮಲ್ಲಿರುವ ಒಗ್ಗಟ್ಟನ್ನು ಮೆರೆದಿದ್ದಾರೆ.

ನಮ್ಮ ಬಂಟರ ಸಂಘದ ಈ ಎಲ್ಲಾ ಕೆಲಸಗಳನ್ನು ಮೆಚ್ಚಿ ನಮಗೆ ಹುರಿದುಂಬಿಸಿದವರು ಅನೇಕರು. ಈ ನಮ್ಮ ಬಾಂಧವ್ಯ ಹೀಗೆ ಮುಂದುವರಿಯಲಿ, ಒಳ್ಳೆಯ ದಿನಗಳು ತಾನಾಗಿಯೇ ಬರುತ್ತವೆ.

Every year brings with it new challenges, opportunities to mould yourself into what you want to be. A new book with all blank pages – it is up to you to fill those pages with meaningful and happy deeds that you want to do. Let's not blame the year 2020, though it had been an unpredictable, tough journey through the pandemic, with many difficulties, quite hard for many people. As we welcome the year 2021, let's all be positive with shining spirits and aspirations for a better future.

May the year 2021 bring new happiness, new goals, new dreams, new achievements and a lot of new inspirations on our life. Wishing everyone a happy year 2021.

ಸರ್ವ ಸದಸ್ಯರಿಗೂ 2021ರ ಹಾರ್ದಿಕ ಶುಭಾಶಯಗಳು

**ಎಂ. ಮುರಲೀಧರ ಹೆಗ್ಡೆ**
hegdemm@gmail.com

# ಅಧ್ಯಕ್ಷರ ಮಾತು



ಮಾನ್ಯ ಸದಸ್ಯರೇ,

ಬಹುದಿನಗಳ ನಂತರ ಸ್ನೇಹಚಿಂತನೆ ಪತ್ರಿಕೆ ತಮ್ಮ ಮುಂದೆ ಬರುತ್ತಿದೆ.

ಮುರುಡೇಶ್ವರ ಪುಟ್ಟ ಹಳ್ಳಿಯಲ್ಲಿ ಜನಿಸಿ, ಹಂತಹಂತವಾಗಿ ವಿವಿಧ ಉದ್ಯಮಗಳನ್ನು ದೇಶದಾದ್ಯಂತ ಪ್ರಾರಂಭಿಸಿದ ಯಶಸ್ವೀ ಉದ್ಯಮಿ, ಆರ್.ಎನ್.ಎಸ್. ಸಮೂಹ ಸಂಸ್ಥೆಗಳ ಸಂಸ್ಥಾಪಕ, ಬಂಟ ಸಮುದಾಯದ ಕೀರ್ತಿಯನ್ನು ದೇಶದ ಉದ್ದಗಲಕ್ಕೂ ಪಸರಿಸಿದ ಹಿರಿಯ ಚೇತನ ಡಾ. ಆರ್.ಎನ್.ಶೆಟ್ಟಿಯವರು ಇಂದು ನಮ್ಮೊಂದಿಗಿಲ್ಲ ಎನ್ನುವುದು ವಿಷಾದದ ಸಂಗತಿ. ಬೆಂಗಳೂರು ಬಂಟರ ಸಂಘ ಹಾಗೂ ಡಾ.ಆರ್.ಎನ್.ಶೆಟ್ಟಿಯವರಿಗೂ ಅವಿನಾಭಾವ ಸಂಬಂಧ. ನಮ್ಮ ಸಂಘವನ್ನು ಹಾಗೂ ಸಂಘದ ಶೈಕ್ಷಣಿಕ ಸೇವೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವಲ್ಲಿ ಡಾ. ಆರ್.ಎನ್.ಶೆಟ್ಟಿಯವರು ನೀಡಿದ ಕೊಡುಗೆಯನ್ನು ನಾವೆಂದಿಗೂ ಮರೆಯುವಂತಿಲ್ಲ. ಇತ್ತೀಚಿನ ದಿನಗಳವರೆಗೂ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದ ಆಡಳಿತ ಮಂಡಳಿಯ ಸಭೆಗಳಲ್ಲಿ ಬಹು ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದ ಶೆಟ್ಟಿಯವರು, ಯಲಚಗುಪ್ಪೆಯಲ್ಲಿ ನಿರ್ಮಾಣಗೊಳ್ಳುತ್ತಿರುವ ಸಂಘದ ಇನ್ನೊಂದು ಶೈಕ್ಷಣಿಕ ಸಂಸ್ಥೆಯ ಆರಂಭಕ್ಕೆ ಕಾತರದಿಂದ ಕಾಯುತ್ತಿದ್ದರು. ಮೊನ್ನೆಮೊನ್ನೆಯವರೆಗೆ ಯೋಜನೆಯ ಕಾಮಗಾರಿಯ ಲೆಕ್ಕಪತ್ರಗಳನ್ನು ಸಹ ಬಹಳ ಮುತುವರ್ಜಿಯಿಂದ ಖುದ್ದು ತಾವೇ ಪರಿಶೀಲಿಸಿ, ಯೋಜನೆಯ ಪ್ರಗತಿಯ ಬಗ್ಗೆ ವಿಚಾರಿಸುತ್ತಿದ್ದರು. ಬೆಂಗಳೂರು ಬಂಟರ ಸಂಘ ಮಾತ್ರವಲ್ಲದೇ ರಾಜ್ಯದ ಇತರ ಸ್ಥಳಗಳಲ್ಲಿ ಪ್ರಾರಂಭಗೊಂಡ ಬಂಟರ ಸಂಘಗಳಿಗೂ ಬೃಹತ್ ಮೊತ್ತದ ದೇಣಿಗೆ ನೀಡುವುದರ ಮೂಲಕ ಬಂಟ ಸಮುದಾಯದ ಅಭ್ಯುದಯಕ್ಕೆ ತಮ್ಮ ಕಾರಣೀಕರ್ತರಾಗಿರುತ್ತಾರೆ. ಯಶಸ್ವೀ ಉದ್ಯಮಿಯಾಗಿ, ಕೊಡುಗೈದಾನಿ, ಶೈಕ್ಷಣಿಕ ಕ್ಷೇತ್ರದ ಹರಿಕಾರ, ಸಾವಿರಾರು ಕುಟುಂಬಗಳಿಗೆ ಆಸರೆಯಾಗಿ ತುಂಬು ಜೀವನ ನಡೆಸಿ ತನ್ನ 92 ನೇ ಹರೆಯದಲ್ಲಿ ಅಸ್ತಂಗತರಾದ ಬಂಟ ಸಮುದಾಯದ ಕಣ್ಮಣಿ ಡಾ.ಆರ್.ಎನ್.ಶೆಟ್ಟಿಯವರಿಗೆ ಬೆಂಗಳೂರು ಬಂಟರ ಸಂಘದ ಸರ್ವ ಸದಸ್ಯರ ಪರವಾಗಿ ಶ್ರದ್ಧಾಂಜಲಿ ಅರ್ಪಿಸುತ್ತಿದ್ದೇನೆ.

ಬಹುದಿನಗಳ ನಿರೀಕ್ಷೆಯ ಬಂಟರ ಸಂಘ ಆರ್.ಎನ್.ಎಸ್.ವಿದ್ಯಾನಿಕೇತನ–2 ಯೋಜನೆಯ ಕಟ್ಟಡ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳುವ ಹಂತಕ್ಕೆ ಬಂದಿದ್ದು, ಇಂಟೀರಿಯರ್, ಎಲೆಕ್ಟ್ರಿಕಲ್ ಹೆಚ್.ಟಿ.ವರ್ಕ್ಸ್, ಲ್ಯಾಂಡ್‌ಸ್ಕೇಪ್ ಮೊದಲಾದ ಕೆಲಸಗಳು ಬಾಕಿ ಇದೆ. ನೂತನ ಶೈಕ್ಷಣಿಕ ಸಂಸ್ಥೆಗೆ ಹೆಚ್ಚಿನ ವಿದ್ಯಾರ್ಥಿಗಳನ್ನು ಕರೆತರುವಲ್ಲಿ ನಮ್ಮ ಸಮಿತಿಯು ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ. ಯೋಜನಾ ಸಮಿತಿಯ ಚೇರ್‌ಮೆನ್ ಶ್ರೀ ಕೆ. ಪ್ರಕಾಶ್ ಶೆಟ್ಟಿಯವರು ಈ ಯೋಜನೆಗೆ ಒಂದು ಕೋಟಿ ರೂ.ಗಳ ದೇಣಿಗೆಯನ್ನು ನೀಡಿರುತ್ತಾರೆ ಎಂದು ತಿಳಿಸಲು ಹರ್ಷಿಸುತ್ತೇನೆ.

ಯೋಜನೆ ಪೂರ್ಣಗೊಳ್ಳುವ ಈ ಹಂತದಲ್ಲಿ ಇನ್ನೂ ಸುಮಾರು 10 ಕೋಟಿ ರೂ.ಗಳ ನಿಧಿಯ ಅವಶ್ಯಕತೆಯಿದ್ದು, ಸುಮಾರು 5 ಕೋಟಿ ರೂಗಳ ಅಭಾವ ಉಂಟಾಗಲಿದೆ. ಆದ್ದರಿಂದ ಸಹೃದಯ ಸಮುದಾಯ ಬಾಂಧವರೆಲ್ಲರೂ ತಮ್ಮ ತನು, ಮನ, ಧನದ ಸಹಕಾರ ನೀಡುವುದರ ಮೂಲಕ ಈ ಯೋಜನೆಯ ಯಶಸ್ಸಿಗೆ ಕೈಜೋಡಿಸಬೇಕಾಗಿ ವಿನಂತಿ.

ವಂದನೆಗಳೊಂದಿಗೆ,

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

# ಗೌರವ ಕಾರ್ಯದರ್ಶಿಗಳ ವರದಿ



ಸರ್ವರಿಗೂ ಹೊಸ ವರ್ಷ ಹಾಗೂ ಮಕರ ಸಂಕ್ರಾಂತಿಯ ಹಾರ್ದಿಕ ಶುಭಾಶಯಗಳು

ಗ್ರಾಮೀಣ ಭಾಗದಿಂದ ಉದ್ಯೋಗ ವಿದ್ಯಾಭ್ಯಾಸ ನಿಮಿತ್ತ ಬೆಂಗಳೂರಿಗೆ ಬರಲಿರುವ ಪುರುಷರಿಗಾಗಿ ಆರಂಭಿಸಿರುವ 'ಜಯಪ್ರಸಾದ್ ಶೆಟ್ಟಿ ಇರ್ಮಾಡಿ ಬಂಟ್ಸ್ ಜೆಂಟ್ಸ್ ಹಾಸ್ಟೆಲ್' ಎನ್ನುವ ಹೆಸರಿನಿಂದ ಉದ್ಘಾಟನೆಗೊಂಡಿದ್ದು ಪ್ರಸ್ತುತ ಸುಮಾರು 40 ಜನರು ಹಾಸ್ಟೆಲ್‌ನಲ್ಲಿ ಪ್ರವೇಶ ಪಡೆದಿದ್ದಾರೆ. ಇನೂ ಸುಮಾರು 60 ಜನರ ಪ್ರವೇಶಕ್ಕೆ ಅವಕಾಶವಿದ್ದು ವಿದ್ಯಾರ್ಥಿಗಳಿಗೆ ಶುಲ್ಕದಲ್ಲಿ ರಿಯಾಯಿತಿ ನೀಡಲಾಗುವುದು. ಆಸಕ್ತ ಹಾಗೂ ಅವಶ್ಯವಿರುವ ಸಮುದಾಯ ಬಾಂಧವರು ಹಾಸ್ಟೆಲ್‌ನ ಪ್ರಯೋಜನ ಪಡೆಯಬೇಕಾಗಿ ವಿನಂತಿ.

ಬೆಂಗಳೂರಿನ ಹಾಗೂ ಕರಾವಳಿ ಭಾಗದ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ನಮ್ಮ ಸಂಘದ ಪದವಿ ಪೂರ್ವ ಕಾಲೇಜಿನಲ್ಲಿ 37 ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾಭ್ಯಾಸ ಕಲ್ಪಿಸಲಾಗಿದ್ದು ಅಗತ್ಯವಿರುವ ಅದರಲ್ಲಿವಿದ್ಯಾರ್ಥಿಗಳಿಗೆ ಜೆಂಟ್ಸ್ ಹಾಸ್ಟೆಲ್‌ನಲ್ಲಿ ಹಾಗೂ 3 ವಿದ್ಯಾರ್ಥಿನಿಯರಿಗೆ ಮಹಿಳಾ ಹಾಸ್ಟೆಲ್‌ನಲ್ಲಿ ವಸತಿ ಕಲ್ಪಿಸುವ ವ್ಯವಸ್ಥೆ ಮಾಡಲಾಗಿದೆ.

ವಿವಿಧ ದಾನಿಗಳಿಂದ ಕೊಡಮಾಡಿದ 10 ನೂತನ ಮೊಬೈಲ್ ಫೋನ್‌ಗಳನ್ನು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ಆನ್‌ಲೈನ್ ತರಗತಿಗಳಿಗಾಗಿ ವಿತರಿಸಲಾಯಿತು. ಕೋವಿಡ್ ಲಾಕ್‌ಡೌನ್‌ನಿಂದ ಸಂಘದ ಸಭಾಭವನದಲ್ಲಿ ನಡೆಯುವ ಮದುವೆ ಇತ್ಯಾದಿ ಸಮಾರಂಭಗಳ ಬುಕ್ಕಿಂಗ್‌ನಲ್ಲಿ ಗಣನೀಯ ಇಳಿಕೆ ಕಂಡಿದ್ದು ಇದರಿಂದಸಂಘದ ಆದಾಯಕ್ಕೆ ತೀವ್ರ ಹಿನ್ನಡೆಯಾಗಿದೆ. ಈ ನಿಟ್ಟಿನಲ್ಲಿ ಸಭಾಭವನದ ಬಾಡಿಗೆ ದರದಲ್ಲಿಆಕರ್ಷಕ ರಿಯಾಯಿತಿ ಘೋಷಿಸಲಾಗಿದೆ.


ಯಲಚಗುಪ್ಪೆಯಲ್ಲಿ ನಿರ್ಮಾಣಗೊಳ್ಳುತ್ತಿರುವ ಬಂಟರಸಂಘ ಆರ್.ಎನ್.ಎಸ್. ವಿದ್ಯಾನಿಕೇತನ-ಋ ಯೋಜನೆಯ ಕಾಮಗಾರಿ ಬಹುತೇಕ ಪೂರ್ಣಗೊಳ್ಳಲಿದ್ದು, ಶಾಲೆಗೆ ಹೆಚ್ಚು ವಿದ್ಯಾರ್ಥಿಗಳ ದಾಖಲಾತಿ ಮಾಡಿಸುವಲ್ಲಿ'ಮಾರ್ಕೆಟಿಂಗ್ ಟೀಂ' ವಿಭಿನ್ನವಾಗಿ ಕಾರ್ಯೋನ್ಮುಖವಾಗಿದೆ.

ಇತ್ತೀಚೆಗೆ ನಿಧನರಾದ ಬೆಂಗಳೂರು ಬಂಟರ ಸಂಘದ ಹಿರಿಯ ಸದಸ್ಯ, ಕೊಡುಗೈ ದಾನಿ, ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಶಾಲೆಯ ಚೇರ್‌ಮೆನ್ ಶ್ರೀ ಆರ್.ಎನ್. ಶೆಟ್ಟಿಯವರ ಗೌರವಾರ್ಥ 'ನುಡಿನಮನ' ಕಾರ್ಯಕ್ರಮವನ್ನು ದಿನಾಂಕ 27.12.2020 ರಂದು ಸಂಘದ ಸಭಾಭವನದಲ್ಲಿ ಆಯೋಜಿಸಲಾಗಿತ್ತು.

ದಿನಾಂಕ 06.02.2021ರಂದು ನಡೆದ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿ ತಮ್ಮ ಅಮೂಲ್ಯ ಸಲಹೆ-ಸೂಚನೆಗಳನ್ನು ನೀಡಿ, ನಮ್ಮನ್ನು ಮುನ್ನಡೆಸಿದ ತಮಗೆಲ್ಲರಿಗೂ ಹೃತ್ಪೂರ್ವಕ ವಂದನೆಗಳು. ಸಂಘದ ಮೇಲಿರುವ ತಮ್ಮ ಅಭಿಮಾನ ನಿರಂತರವಾಗಿರಲಿ ಎಂದು ಆಶಿಸುವ,

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

# ಕಾಯಕಯೋಗಿ – ಡಾ. ಆರ್.ಎನ್.ಎಸ್. ಅಸ್ತಂಗತ



ಶ್ರೀ ಡಿ. ಚಂದ್ರಹಾಸ್ ರೈ
ಮಾಜಿ ಅಧ್ಯಕ್ಷರು ಮತ್ತು
ಆರ್.ಎನ್. ಶೆಟ್ಟಿಯವರ ನಿಕಟವರ್ತಿಗಳು

17.12.2020ರಂದು ಬೆಳಗ್ಗಿನ ಜಾವ ಮಿತ್ರ ಆನಂದರಾವ್ ಶೆಟ್ಟರು ದೂರವಾಣಿ ಮುಖೇನ ಬಂಟ ಬಂಧುವಿನ ದೇಹಾಂತ್ಯದ ಆಘಾತಕಾರಿ ಸುದ್ದಿ ತಿಳಿಸಿದರು. ದೈನ್ಯೇನ ಜೀವನಂ ಅನಾಯೇಸೇನಾ ಮರಣಂ. 92 ಸಂವತ್ಸರಗಳ ವೈವಿಧ್ಯಮಯ ಹೋರಾಟದ ಬದುಕು, ದಾನ ಧರ್ಮಗಳ ಸಮಾಗಮಕ್ಕೆ ವಿರಾಮ ಹಾಡಿತು.

15.08.1928ರಂದು ಮುರುಡೇಶ್ವರದಲ್ಲಿ ಕೃಷಿಕ ಕುಟುಂಬದಲ್ಲಿ ಜನಿಸಿದ ಶೆಟ್ಟರು, ದೊಡ್ಡ ವಿದ್ಯಾವಂತರಲ್ಲ. ಅವರ ಜೀವನವೇ ಪಾಠಶಾಲೆ, ಕರ್ಮಭೂಮಿ, ಧರ್ಮಭೂಮಿ. ಜನ್ಮನೇ ಜಾಯೇತ್, ಕರ್ಮಣೇ ದ್ವಿಜಃ. ಶೆಟ್ಟರು ಕಾಯಕಯೋಗಿಯಾಗಿ ಸ್ವಪ್ರಯತ್ನದಿಂದ ದುಡಿಮೆಯೇ ದೇವರೆಂದು ನಂಬಿ ಯಶಸ್ವಿಯಾದ ಓರ್ವ ಅಪ್ರತಿಮ ಸಾಧಕ.

1960ರಿಂದ ಶಿರಸಿಯಲ್ಲಿ ತಮ್ಮ ಕಾಯಕ ಪ್ರಾರಂಭ. 1961ರಲ್ಲಿ ಆರ್.ಎನ್.ಎಸ್ ಕಂಪನಿ ಪ್ರಾರಂಭ. ನವ ಕರ್ನಾಟಕದ ನಿರ್ಮಾಣದಲ್ಲಿ ಶೆಟ್ಟರು ಅಸಾಧಾರಣ ಕೊಡುಗೆ ನೀಡಿದ್ದಾರೆ. ಅವರ ಕಂಪನಿ ನಿರ್ಮಿಸಿದ ಲಿಂಗನಮಕ್ಕಿ ಅಣೆಕಟ್ಟು, ಅಪ್ಪರ್ ಭದ್ರಾ ನೀರಾವರಿ ಯೋಜನೆ, ಅಪ್ಪರ್ ಕೃಷ್ಣಾ ಯೋಜನೆ, ವಾರಾಹಿ ಜಲ ವಿದ್ಯುತ್, ಶರಾವತಿ ಹೀಗೆ ಹತ್ತು ಹಲವು ಕಾಮಗಾರಿಯಲ್ಲಿ ಸಿಂಹಪಾಲು ಶೆಟ್ಟರ ಕಂಪೆನಿಗೆ ಸಲ್ಲುತ್ತದೆ.

ಶೆಟ್ಟರ ಕಾರ್ಯಕ್ಷೇತ್ರ ರಸ್ತೆ ನಿರ್ಮಾಣದಲ್ಲೂ ಅಪ್ರತಿಮ ಯಶಸ್ಸು ಗಳಿಸಿದೆ. ಪಣಜಿ, ಮಂಗಳೂರು, ಧಾರವಾಡ, ಬೆಳಗಾವಿ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ, ಕೊಂಕಣ ರೈಲ್ವೆಯ ನಿರ್ಮಾಣದಲ್ಲಿ 18 ಸುರಂಗ ನಿರ್ಮಿಸಿ ಶಭಾಸ್‌ಗಿರಿ ಗಳಿಸಿಕೊಂಡ ಕಂಪೆನಿ ಆರ್.ಎನ್.ಎಸ್, ಕಟ್ಟಡ ನಿರ್ಮಾಣದಲ್ಲೂ ಕೈ ಚಾಚಿದ ಶೆಟ್ಟರು ಅನೇಕ ಪ್ರಸಿದ್ಧ ಸಂಸ್ಥೆಗಳಿಗೆ ಕಟ್ಟಡ ನಿರ್ಮಿಸಿ ಇತಿಹಾಸ ಬರೆದರು. ಮುಖ್ಯವಾಗಿ ಕೆ.ಯಲ್.ಇ ಆಸ್ಪತ್ರೆ, ಬೆಂಗಳೂರಿನ ತಾಜ್ ಹೋಟೆಲ್, ಆರ್.ಎನ್.ಎಸ್ ಶಾಂತಿನಿಕೇತನ, ಮುರುಡೇಶ್ವರ, ಹುಬ್ಬಳ್ಳಿಗಳಲ್ಲಿ ಹೋಟೇಲ್ ನಿರ್ಮಾಣ, ಆರ್.ಎನ್.ಎಸ್ ಮೋಟಾರ್ಸ್, ಆಕರ್ಷಣೀಯ ಪ್ರವಾಸಿ ತಾಣಗಳಲ್ಲಿ ಮುರುಡೇಶ್ವರಕ್ಕೆ ಅಗ್ರಸ್ಥಾನ.

ಮುರುಡೇಶ್ವರದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ನೀಗಿಸುವ ಸಲುವಾಗಿ ಶೆಟ್ಟರು 35 ಕಿಲೋ ಮೀಟರ್ ದೂರದಿಂದ ಕೋಟ್ಯಂತರ ರೂ. ವೆಚ್ಚದೊಂದಿಗೆ ನೀರು ಹರಿಸಿರುವುದು ಜನ ಮಾನಸದಲ್ಲಿ ಅಚ್ಚಳಿಯದೇ ಸದಾಕಾಲ ಜಿನುಗುಡುತ್ತಿದೆ. ಮುರುಡೇಶ್ವರದಲ್ಲಿ ಜಗತ್ಪ್ರಸಿದ್ಧ 123 ಅಡಿ ಎತ್ತರದ ಶಿವಲಿಂಗ, 249 ಅಡಿ ಎತ್ತರದ ಗೋಪುರ, ಸಮುದ್ರದಲ್ಲಿ ಹೋಟೆಲ್, ಶಾಲೆಗಳ ಸ್ಥಾಪನೆ, ತಾಂತ್ರಿಕ ಕಾಲೇಜ್, ಆಸ್ಪತ್ರೆ ನಿರ್ಮಿಸಿ ಮುರುಡೇಶ್ವರವನ್ನು ಭಾರತದ ಭೂಪಟದಲ್ಲಿ ಪ್ರವಾಸಿ ತಾಣವನ್ನಾಗಿ ಪರಿವರ್ತಿಸಿದ ಹರಿಕಾರ. ಜನ್ಮಭೂಮಿ, ಮಾತೃಭೂಮಿಗೆ ಕಾಯಕಯೋಗಿ ನೀಡಿದ ದಾನ ಧರ್ಮಗಳಿಂದಲೇ ಶೆಟ್ಟರನ್ನು ದಾದ ಎಂದು ಕರೆಯುವುದೇ ಸೂಕ್ತ.

ಬಂಟರ ಸಂಘಗಳಿಗೆ ಪ್ರೋತ್ಸಾಹ ಸಹಾಯಧನ. 'ಸಿರಿಬಂದಾಗ ಕರೆದು ದಾನವ ಮಾಡು' ಎಂಬ ಮಾತಿನಂತೆ ಗಳಿಸಿದ್ದರಲ್ಲಿ ಇಷ್ಟೊಂದು ದಾನವನ್ನು ಸಮಾಜಕ್ಕೆ ಸಮರ್ಪಿಸಿದ ಮಹಾನ್ ಚೇತನ ಶೆಟ್ಟರು. ನಾಡಿನಾದ್ಯಂತ ಬಂಟರ ಸಂಘಗಳಿಗೆ ದೇಣಿಗೆ ನೀಡುತ್ತಾ ಬಂದಿರುವ ಶೆಟ್ಟರು ಸರಳ, ಸಜ್ಜನಿಕೆ, ದನ್ಯತಾ ಭಾವದಿಂದ ಅಹಂ ಇಲ್ಲದೆ ಪ್ರತಿಫಲಾಪೇಕ್ಷೆಗೆ ಕಿವಿ ಕೊಡದೆ, ಊಹೆಗೆ ನಿಲುಕದಷ್ಟು ದೇಣಿಗೆ ನೀಡಿರುತ್ತಾರೆ. ಬೆಂಗಳೂರು ಬಂಟರ ಸಂಘಕ್ಕೆ ಅಪಾರ ಕೊಡುಗೆ, ಪ್ರವೇಶ ದ್ವಾರವೇ ಅವರ ಹೆಸರಿನಲ್ಲಿದೆ. 2001ರಲ್ಲಿ

ಜನಾನುರಾಗಿ ಬಂಟರ ಸಂಘದ ಅಧ್ಯಕ್ಷರಾಗಿದ್ದ ಸಂಸದ್ ಸದಸ್ಯ ಐ. ಎಂ. ಜಯರಾಮ ಶೆಟ್ಟರ ಜೊತೆಗೂಡಿ ಶಾಲಾ ಕಟ್ಟಡವನ್ನು ವಿಸ್ಮಯಕಾರಿಯಾಗಿ ಮೂರು ತಿಂಗಳಿನಲ್ಲಿ ಮುಗಿಸಿ ಈ ಪ್ರದೇಶದ ಅತ್ಯುತ್ತಮ ಶೈಕ್ಷಣಿಕ ಕೇಂದ್ರವನ್ನಾಗಿ ಪರಿವರ್ತಿಸಿ, ಇಂದು ಬಂಟರ ಸಂಘ ಆರ್.ಎನ್.ಎಸ್–II 9 ಎಕ್ರೆ ಪ್ರದೇಶದಲ್ಲಿ ಯೋಜನಾ ವಿಭಾಗದ ಚೇರ್‌ಮೆನ್ ಶ್ರೀ ಕೆ. ಪ್ರಕಾಶ್ ಶೆಟ್ಟರ ಸಹಯೋಗದೊಂದಿಗೆ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಆರ್.ಎನ್.ಎಸ್ ನಿರ್ಮಿಸಿ ಚಲೋದಾಗಿ ಮಾಡುತ್ತಿರುವಾಗಲೇ ನಮ್ಮಿಂದ ದೂರವಾದರೂ ಶೈಕ್ಷಣಿಕ ಕ್ರಾಂತಿಯ ಹರಿಕಾರರೆಂದೇ ಹೇಳಬಹುದು. ದಕ್ಷಿಣ ಕನ್ನಡಕ್ಕೆ ಕಾಲಿಟ್ಟಾಗ ಮೊದಲು ಸಿಗುವುದೇ ಬಂಟ್ವಾಳದ ನೇತ್ರಾವತಿ ನದಿ ದಂಡೆಯಲ್ಲಿ ತಲೆ ಎತ್ತಿ ನಿಂತಿರುವ ಬಂಟರ ಭವನಕ್ಕೆ ಶೆಟ್ಟರು ಕೋಟಿಗಟ್ಟಲೆ ದಾನ ನೀಡಿರುವುದರೊಂದಿಗೆ ನಿರ್ಮಾಣಗೊಂಡಿದೆ. ಮಂಗಳೂರು, ಕುಂದಾಪುರ, ಪಡುಬಿದ್ರಿ, ಮೈಸೂರು, ಹುಬ್ಬಳ್ಳಿಯಲ್ಲಿ ಬಂಟರ ಸಂಘಗಳಿಗೆ ಆರ್ಥಿಕ ನೆರವು ನೀಡಿರುವ ಶೆಟ್ಟರು ಪ್ರತಿಫಲಾಪೇಕ್ಷೆಯನ್ನು ಬಯಸಿದವರೇ ಅಲ್ಲ. ಸುಂದರರಾಮ್ ಶೆಟ್ಟರ ಹೆಸರಿನ ಸ್ಮಾರಕ ಮಂದಿರಕ್ಕೆ ಮೂಲ್ಕಿಯಲ್ಲಿ 6 ಕೋಟಿಗೂ ಮಿಗಿಲಾದ ಆರ್ಥಿಕ ನೆರವು ನೀಡಿರುವ ಶೆಟ್ಟರು ಸುಂದರರಾಮ್ ಶೆಟ್ಟರ ಅಭಿಮಾನಿಯೂ ಹೌದು. ಬಂಟ ಸಮಾಜದ ಪ್ರಾತಃ ಸ್ಮರಣೀಯರಲ್ಲಿ ಸುಂದರರಾಮ್ ಶೆಟ್ಟರು, ಆರ್.ಎನ್ ಶೆಟ್ಟಿಯವರು ಧ್ರುವ ತಾರೆಯಂತೆ ನೆನಪಿನ ಅಂಗಳದಲ್ಲಿ ಉಳಿಯುವುದಿಲ್ಲವೇ? ಶೈಕ್ಷಣಿಕ ಕ್ರಾಂತಿಯ ಹರಿಕಾರ ಶೆಟ್ಟರು ಬೆಂಗಳೂರಿನಲ್ಲಿ ತನ್ನ 100 ಎಕ್ರೆ ಜಮೀನಿನ 40 ಎಕ್ರೆ ಪ್ರದೇಶದಲ್ಲಿ ಆರ್.ಎನ್.ಎಸ್ ಐಟಿ ನಿರ್ಮಿಸಿ ಅತೀ ಹೆಚ್ಚಿನ ಬೇಡಿಕೆ ಇರುವ ತಾಂತ್ರಿಕ ವಿದ್ಯಾಲಯವನ್ನು ನಾಡಿಗೆ ಸಮರ್ಪಿಸಿ ಅಜರಾಮರರಾಗಿದ್ದಾರೆ.

ಕ್ರೀಡಾಪ್ರೇಮಿ ಶೆಟ್ಟರು ಹಲವಾರು ರಾಷ್ಟ್ರೀಯ ಕ್ರೀಡೆಗಳಿಗೆ ಕ್ರೀಡಾಪಟುಗಳಿಗೆ ನೆರವು ನೀಡಿ, ಆರ್.ಎನ್.ಎಸ್ ಕ್ರೀಡಾಂಗಣವನ್ನು ಹುಬ್ಬಳ್ಳಿಯಲ್ಲಿ ನಿರ್ಮಿಸಿ ಇತಿಹಾಸ ಬರೆದಿದ್ದಾರೆ. ಆರ್.ಎನ್.ಎಸ್ ಲೆಕ್ಕವಿಲ್ಲದಷ್ಟು ಜನರಿಗೆ ಅಂದಿನಿಂದ ಇಂದಿನವರೆಗೆ ಉದ್ಯೋಗ ನೀಡಿ ಬದುಕಿಗೊಂದು ಆಶ್ರಯದಾತರಾಗಿ, ಅನ್ನದಾತರಾಗಿ, ಬಡವ – ಶ್ರೀಮಂತರೆಂಬ ಭೇದವಿಲ್ಲದೆ, ಸರಳತೆ, ಸಜ್ಜನಿಕೆಯ ಸಾಕಾರ ಮೂರ್ತಿಯಾಗಿ ಕಣ್ಣಮುಂದೆ ನಿಲ್ಲುತ್ತಾರೆ.

ಬಂಟರ ಸಂಘದ ಶಾಲೆ ಸಿಲ್ವರ್ ಜ್ಯುಬಿಲಿ ಸಮಾರಂಭವನ್ನು ಎರಡು ದಿನಗಳ ಕಾಲ ವಿಜೃಂಭಣೆಯಿಂದ ನಡೆಸಿ ಎಲ್ಲರನ್ನು ಸಂತೃಪ್ತಿಗೊಳಿಸಿ, ದಿನವಿಡೀ ಬೆರೆತು ನಲಿದು ಶೆಟ್ಟರು ಸಂತಸ ಪಟ್ಟದ್ದು ಅತ್ಯಂತ ಗಮನಾರ್ಹ ವಿಚಾರವಾದರೆ, ಇದರ ಹಿಂದೆ ಶೆಟ್ಟರ ಪರಿಶ್ರಮ, ಚಲೋದಾಗಬೇಕೆಂಬ ಅವರ ಧ್ಯೇಯ, ಇಂದು ರ್‍ಯಾಂಕ್‌ಗಳು ಬರುವಷ್ಟರ ಮಟ್ಟಿಗೆ ತಲುಪಿದೆ. ಶೆಟ್ಟರೇ ನಿಮ್ಮನ್ನು ಹೇಗೆ ವರ್ಣಿಸಿದರೂ ತಪ್ಪಾಗಲಾರದು. ನಿಮ್ಮ ಸಮಯ ಪ್ರಜ್ಞೆಯ ಒಂದು ತುಣುಕನ್ನು ನಾನು ಇಲ್ಲಿ ಬರೆಯಲೇಬೇಕು. ಶೆಟ್ಟರ ಎಲ್ಲ ಸಂಖ್ಯೆ 6. 2001 ಶಾಲಾ ಕಟ್ಟಡ ನಿರ್ಮಾಣದ ಸಮಯ, ನಾನು ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸುತ್ತಿದೆ. ಶ್ರೀ ಐ.ಎಂ ಜಯರಾಮ ಶೆಟ್ಟರು ನನ್ನಲ್ಲಿ ವಿಶ್ವಾಸವಿಟ್ಟು ಶೆಟ್ಟರ ಜೊತೆ ವ್ಯವಹರಿಸಬೇಕೆಂಬ ಅಣತಿಯನ್ನು ನನ್ನ ಮೇಲಿಟ್ಟಿದ್ದರು. ಶೆಟ್ಟರ ಆಫೀಸಿನಿಂದ ಬೆಳಗ್ಗೆ 6 ಗಂಟೆಗೆ ಆರ್.ಎನ್.ಎಸ್ ಬರುತ್ತಾರೆಂಬ ವಿಚಾರ ತಿಳಿಸುತ್ತಿದ್ದರು. ಬೆಳಿಗ್ಗೆ 6 ಗಂಟೆಗೆ ಸರಿಯಾಗಿ 666 ನಂಬರಿನ ಕಾರಿನಲ್ಲಿ ಶೆಟ್ಟರು ಇಳಿಯುತ್ತಿದ್ದರು, ಒಂದು ಗಂಟೆ ಕಳೆದು ಅವರ ಕಾಲೇಜು, ಅಲ್ಲಿಂದ ಒಂದು ಗಂಟೆಯಲ್ಲಿ ಗೋಲ್ಫ್ ಗ್ರೌಂಡ್. ಮುಂದಿನ ಒಂದು ಗಂಟೆ ನಿತ್ಯಕರ್ಮ, ಸೀದಾ ಎಂ.ಜಿ ರೋಡ್ ಆಫೀಸಿಗೆ ಪ್ರತ್ಯಕ್ಷ. ಇತ್ತೀಚಿನ ವರ್ಷಗಳವರೆಗೂ ಶೆಟ್ಟರು ಸಮಯ ಪ್ರಜ್ಞೆಗೆ ರಾಜಿ ಮಾಡುತ್ತಿರಲಿಲ್ಲ.

ಹಲವಾರು ಪ್ರಶಸ್ತಿಗಳು – ಪ್ರಮುಖವಾಗಿ ರಾಜ್ಯೋತ್ಸವ ಪ್ರಶಸ್ತಿ, ವಿಶ್ವೇಶ್ವರಯ್ಯ ಪ್ರಶಸ್ತಿ, ಡಾಕ್ಟರೇಟ್ ಪ್ರಶಸ್ತಿಗಳು ಅವರನ್ನು ಹುಡುಕಿಕೊಂಡು ಬಂದಿವೆ.

ಶೆಟ್ಟರ ಜೀವನ ಚರಿತ್ರೆ ಒಂದು ಪಿ.ಹೆಚ್.ಡಿಗೆ ಅರ್ಹವಾದಷ್ಟು ವಿಚಾರಧಾರೆಗಳ ಮಹಾಪೂರ. ಕೈಹಿಡಿದ ಮಡದಿ ಸುಧಾ, ಮೂರು ಗಂಡು, ನಾಲ್ಕು ಹೆಣ್ಣುಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳನ್ನು ಅಗಲಿದ್ದಾರೆ. ಜಾತಸ್ಯ ಮರಣಂ ಧ್ರುವಂ. ಹುಟ್ಟುವ ಮನುಷ್ಯ ಸಾಯಲೇ ಬೇಕು. ಇದು ಪ್ರಕೃತಿ ನಿಯಮ. ಗೀತೆಯ ಸಾಂಖ್ಯಯೋಗದ ಒಂದು ಸಾಲನ್ನು ಉಲ್ಲೇಖಿಸಲಿಚ್ಛಿಸುತ್ತೇನೆ. ಅವ್ಯಕ್ತ ಭೂತಾನಿ, ಮಧ್ಯವ್ಯಕ್ತ ಭೂತಾನಿ ಭಾರತ, ಅವ್ಯಕ್ತ ನಿಧಿನಾನ್ಯೇವ, ತತ್ರಕಾ ಪರಿದೇವನಾ. ವ್ಯಕ್ತ ಅವ್ಯಕ್ತಗಳ ನಡುವೆ ಸಾಧನೆ, ಸಫಲತೆ, ದಾನ ಧರ್ಮ ಸುಂದರ ಬದುಕಿನ ಹಂದರ. ಕೊನೆಗೊಂದು ದಿನ ಎಲ್ಲವೂ ಶೂನ್ಯ. ಆದರ್ಶ ಜೀವನ, ಸರಳತೆ, ಮುಗ್ಧತೆ, ಸಾಧನೆ, ಸಫಲತೆ, ಸಾಮಾಜಿಕ ಕಳಕಳಿ, ವಿದ್ಯಾಪ್ರೇಮಿಯಾಗಿ ಎಲ್ಲಾ ಮಜಲುಗಳಲ್ಲಿ ಕೈಯಾಡಿಸಿ ಆರಂಭಿಕದಲ್ಲಿ ಕಷ್ಟ ನಷ್ಟಗಳಿದ್ದರೂ ದೃತಿಗೆಡದೆ ಯಶಸ್ವಿಯಾದ ಕಾಯಕಯೋಗಿ ಇನ್ನೊಬ್ಬ ಆರ್.ಎನ್.ಎಸ್ ಹುಟ್ಟುವುದು ಕಷ್ಟವೇ ಸರಿ.

ವಿವೇಕಾನಂದರು life is a train journey ಎಂದು ಹೇಳುತ್ತಿದ್ದರು. ನಮ್ಮ ಪ್ರವಾಸದಲ್ಲಿ ಅನೇಕ ಮಿತ್ರರು ಬರುತ್ತಾರೆ, ಪರಿಚಯವಾಗುತ್ತದೆ, ಕೊನೆಗೊಮ್ಮೆ ಅವರ ನಿಲ್ದಾಣ ಬಂದಾಗ ಇಳಿದು ಹೋಗುತ್ತಾರೆ. ಶೆಟ್ಟರು ಬದುಕಿನ ಪಯಣ ಮುಗಿಸಿ ಇಳಿದು ಹೋಗಿದ್ದಾರೆ. ಅಳಿದ ಮೇಲೆ ನೆನಪು ಮಾತ್ರ. ಇಂತಹ ಕ್ಲಿಷ್ಟ ಸಂದರ್ಭದಲ್ಲಿ ಶೆಟ್ಟರ ಕುಟುಂಬಕ್ಕೆ ನೋವನ್ನು ಸಹಿಸುವ ಶಕ್ತಿ ಶ್ರೀ ಪರಮಾತ್ಮ ನೀಡಲಿ. ಮೃತ್ಯೋರ್ಮ ಸದ್ಗಮಯ ಮೃತ್ಯುವಿನಿಂದ ಅಮೃತ್ವದೆಡೆಗೆ, ದೈಹಿಕ ಜೀವ ಪಂಚಭೂತಗಳಲ್ಲಿ ಲೀನವಾಗಿ ಆತ್ಮ ಪರಮಾತ್ಮನಲ್ಲಿ ಸೇರಿಕೊಳ್ಳಲಿ. ನಾಡಿನ ಎಲ್ಲಾ ಬಂಟ ಬಂಧುಗಳು ವಿಶೇಷವಾಗಿ ಬೆಂಗಳೂರು ಬಂಟರ ಸಂಘ ತನ್ನ ಬಂಧುವಿಗೆ ನುಡಿನಮನಗಳನ್ನು ಹೃದಯಂತರಾಳದಿಂದ ಸಲ್ಲಿಸುತ್ತಾ ಭಾಷ್ಪಾಂಜಲಿಯನ್ನು ಅರ್ಪಿಸುತ್ತಿದ್ದೇವೆ. ಶೆಟ್ಟರೇ ಮತ್ತೊಮ್ಮೆ ಈ ನಾಡಿನಲ್ಲಿ ಬಂಟರಾಗಿ ಹುಟ್ಟಿ ಬನ್ನಿ.

ಶೆಟ್ಟರ ಹೆಜ್ಜೆಗುರುತುಗಳನ್ನು ಆದರ್ಶ ಜೀವನದ ಒಂದೆರಡು ಹೆಜ್ಜೆಗಳನ್ನು ನಾವೂ ನಡೆಯಲು ಪ್ರಯತ್ನಿಸೋಣವೇ?



## ಅಭಿನಂದನೆಗಳು

ಕರ್ನಾಟಕ ಸರಕಾರದ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ನಿರ್ದೇಶಕ ಮತ್ತು ಅಧ್ಯಕ್ಷರಾಗಿ **ಡಾ. ಬೇಳೂರು ರಾಘವೇಂದ್ರ ಶೆಟ್ಟಿಯವರು** ನೇಮಕಗೊಂಡಿರುತ್ತಾರೆ. ಇವರಿಗೆ ಬಂಟರ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು.

## ಅಭಿನಂದನೆಗಳು


65ನೇ ಹೊರನಾಡು ಕನ್ನಡಿಗ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಹಾಗೂ ಬೆಂಗಳೂರು ಬಂಟರ ಸಂಘದ ಪ್ರಮುಖ ದಾನಿಗಳಲ್ಲಿ ಒಬ್ಬರಾದ **ಶ್ರೀ ಕುಸುಮೋಧರ ಡಿ. ಶೆಟ್ಟಿಯವರಿಗೆ** ಬಂಟರ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು.



# Dr. R.N. Shetty with exemplary grace, pragematic, demeanour, idealistic outlook and hard work – a real Margadarshak.

**Dr. Rama Nagappa (RN) Shetty (15 August 1928 – 17 December 2020), an Entrepreneur and Philanthropist a karmayogi in the true sense, who left his mark in the fields of business, infrastructure and education. Is a pride of the Bunt community and an icon for generations to emulate. His path finding and trail blazing spirit bought greater honor and respectability to our community. He was the owner of R N Shetty Group of Companies, including RNS Infrastructure, RNS Maruti Suzuki (RNS Motors), Murudeshwar Ceramics, Naveen Hotels and Murudeshwar Power and the Chairman of a chain of educational institutions under the R N Shetty Trust.**

A life well lived is a diamond that shines like a beacon; it stands as an inspiration for those fortunate enough to be able to imbibe its essence in themselves. Dr. Rama Nagappa Shetty, whose life's journey was in itself a testament of the ethos and values one must imbibe, had triumphed over adversities through grit and perseverance, shouldering tirelessly the enormous responsibilities of leadership. He envisioned a growing state and acted as a catalyst with his responsible Entrepreneurship that encompassed organizational growth which stimulated the society's growth as well. He stands tall, as a towering personality rooted in humility. The brilliance of his leadership lay not just in leading from the front but in empowering employees across the companies that he forayed into. As Dr. R N Shetty leaves behind a glorious legacy, we will forever remember his vision, his beliefs and above all else, his compassion and benevolence. We must now continue steadfastly on the path he carved out for us and carry forward his legacy of excellence and humility.



**Humble Beginnings**

Dr. R N Shetty came a long way from his modest beginning in the coastal town of Murudeshwara. His father was the Muktheshwara of Murudeshwara Temple dedicated to Lord Shiva. After completing high school education, he started his career as a civil contractor in Sirsi. During the early 60s, he formed the R N Shetty & Company, a civil engineering and construction company, took up several public infrastructure projects including bridges on the Honnavar–Bangalore road and projects across hydropower, irrigation, and bridges. He also built tunnels for the Konkan Railway and canals for the Upper Krishna Project. Buoyed by the success in the infra sector, he entered the Hospitality business in 1975 through Naveen Hotels Limited. He built a five-star hotel in Bangalore that was leased out to Taj Group and branded as Taj MG Road Hotel in Bangalore. His tryst with the hospitality business continued to be successful with the group adding two additional hotels in

Karnataka, Hotel Naveen in Hubli and the RNS Yatrinivas resort in Murudeshwar. A five star hotel was later built in Bangalore and is leased to the Taj group and operated as Taj Yeshwantpur Hotel.

His incisive mind and pursuit for excellence led his company to grow leaps and bounds. Over the years, the company successfully executed many landmark infrastructure projects like dams, highways, bridges, tunnels and power houses under his able guidance. Further, the company was able diversify and establish presence in the arena of construction, properties, automobiles, manufacture, power, hospitality and education. Though his annual business turnover reached new heights, his simplicity and humility remained untouched over the years. As an individual who remained conscious of his roots, his success mantra seems to be dipped in the age-old adage, simple living and high thinking. Sri R N Shetty chronicle of life reveals his strong sense of social responsibility. A magnanimous philanthropist at heart, he made sure the R.N Shetty family followed his values. His philosophy and vision have spun off a number of welfare activities across different centers of the Company.

Dr. E. Sreedharan, former CMD of Konkan Railway Corporation, and former MD, Delhi Metro Corporation, says "The virtue I admired in him was that he always kept his promises. Once he committed to a particular completion date, he would spare no efforts to complete the work on time. Profit was secondary to him but earning the reputation of completing works on time was his priority. If I remember correctly, the tunnel progress he achieved was perhaps a record for any hard rock tunnel in Konkan railway."

Dr. R.N Shetty's bold decision to build a three storied building for Bunts Sangha RNS Vidyaniketan within the short period of 90 days without sacrificing quality was perhaps unparalleled in construction field.

**Diverse Ventures**

After succeeding in construction business, Mr. Shetty started a polytechnic at Belgaum, rural polytechnic at Murudeshwar, polytechnic college at Sirsi as he believed that real development begins with human development through education. RNS Institute of Technology which he started at Bangalore is a premier institute. The educational institutions established by him was for the benefit of others is the proof of his commitment to the society. Diversifying further, Sri. R N Shetty established a manufacturing unit with the main aim of providing jobs to the local people of Karnataka. With this in view, Shetty established a 'Mangalore Tiles' tiles manufacturing unit in 1977 naming it Murudeshwar Tiles Private Limited. This unit with a capacity of 40,000 tiles per day was one of the largest Mangalore-tile units in the Coastal Karnataka region. Further, he ventured into the manufacturing of ceramic tiles by setting up Murudeshwar Ceramics Limited (MCL) and the power sector with the setting up Murudeshwar Power Corporation Limited. The company has successfully developed and commissioned a mini hydel power project of 11.6 MW at Narayanpur Left Bank Canal in Bijapur district in 1999. He was able to successfully obtain dealership of Maruti Udyog Limited and has opened showrooms at Hubli, Bangalore, Murudeshwar and various other districts. One of its Bangalore showrooms is in fact the biggest in the country and has been rated as Maruti's No 1 dealer in India consecutively. They have set high standards of

excellence and are extremely conscious about delivering value to their customers. This is proved by the fact that they are one of biggest dealers in Maruti cars in the state and have also won awards for their services.

**Religious Leanings**

Apart from his various achievements, Dr. R N Shetty was a deeply religious person, , was also a supreme symbol of humanity. He was instrumental in transforming the town of Murudeshwara and putting it on the tourist map. As a devotee of Lord Shiva, he evinced keen interest in renovating and rebuilding the Murudeshwara temple in Dravidian architectural style. The 249-feet tall Raja Gopura at the temple on the coast of the Arabian Sea is considered the tallest Gopura in the world. The temple held religious significance for the deity, being believed to be one of the five parts of the Atmalinga, which according to Hindu mythology, broke when the demon king Ravana tricked the elephant-god Ganesha into handing it over to him while performing his daily prayers, Sandhya-vandanam.

**Philanthropic Activities**

Developing the country's youth and creating employability for them was always very close to Sri. R N Shetty's heart. This has also been a vital cog in the community development vision of R.N Shetty group of companies. The various engineering marvels across the state, hotels and educational institutions are a standing testimony to all his dreams. Apart from his various ventures, he has actively contributed to many temples, educational institutions and community service related projects in Karnataka and elsewhere. Sri. R N Shetty always believed that education and knowledge are the critical pillars for nation building as they shape the perspective and understanding of the populace and hence, R.N.Shetty Trust has been prominent in the state's educational landscape for decades. R.N.Shetty Trust is a non-profit making organization that was set up for helping the needy students and various educational institutions are run by this organization. It remains a constant endeavor of the trust to provide quality education and healthcare to the masses, as well as religious activities.

**Awards and Recognition**

For his outstanding contribution to the State of Karnataka and its economy, Bangalore University awarded an Honorary Doctorate to Sri. R N Shetty in 2009 and in 2004 the Visvesvaraya Memorial Award was presented to him by the Federation of Karnataka Chambers of Commerce and Industry's (FKCCI). He is also the recipient of the Rajyotsava Award by Government of Karnataka in 2004 and Kaigarika Ratna by KASSIA in 2006.

Dr. R.N Shetty's association with Bunts' Sangha and his timely advice on various issues were too valuable. Bunts' Sangha R.N.S Vidyaniketan, today is one among the leading schools in Bangalore is due to the concern and efforts of Dr. R. N. Shetty.

Sri. R N Shetty was an undisputed leader, a compassionate philanthropist and a visionary, in equal measures. He performed each of his roles with admirable perfection and his humility was both endearing and inspiring. His life is a testament to the fact that one must never give up. We shall continue to fetch inspiration from his teachings for years to come.

**A. Girish Rai**

# ಶ್ರೀ ಜಯಪ್ರಸಾದ್ ಶೆಟ್ಟಿ ಇರ್ಮಾಡಿ ಬಂಟ್ಸ್ ಜಂಟ್ಸ್ ಹಾಸ್ಟೆಲ್– ಉದ್ಘಾಟನಾ ಸಮಾರಂಭ





ಇರ್ಮಾಡಿ ಶ್ರೀ ಜಯಪ್ರಸಾದ್ ಶೆಟ್ಟಿ ಬಂಟ್ಸ್ ಜಂಟ್ಸ್ ಹಾಸ್ಟೆಲ್–ಇದರ ಉದ್ಘಾಟನಾ ಸಮಾರಂಭವು ದಿನಾಂಕ 22.10.2020ರಂದು ಜರುಗಿತು. ಹಾಸ್ಟೆಲ್‌ನ ಪ್ರಮುಖ ದಾನಿಗಳಾದ ಇರ್ಮಾಡಿ ಶ್ರೀ ಜಯಪ್ರಸಾದ್ ಶೆಟ್ಟಿಯವರು ವಸತಿ ಗೃಹವನ್ನು ಉದ್ಘಾಟಿಸಿದರು. ಶ್ರೀ ಆರ್. ಉಪೇಂದ್ರ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಈ ಸಮಾರಂಭಕ್ಕೆ ಬಿ.ಬಿ.ಎಂ.ಪಿ ಮಾಜಿ ಸದಸ್ಯರಾದ ಶ್ರೀ ಕೆ. ಉಮೇಶ್ ಶೆಟ್ಟಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಸಮಾರಂಭದಲ್ಲಿ ಹಾಸ್ಟೆಲ್‌ನ ಇತರ ದಾನಿಗಳನ್ನು ಸನ್ಮಾನಿಸಲಾಯಿತು. ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸಂಘದ ಅನೇಕ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## *Congratulations*



Mr. Shashikiran Shetty, CMD of Allcargo Logistics Mumbai has been appointed by the Ministry of Education, Government of India, as the Chairman of the Society and Board of Governors (BoG) of the National Institute of Industrial Engineering (NITIE), one of India's premium and only institution offering post graduate courses in Industrial Engineering. Bunts Sangha Bangalore congratulates and wishes him all the very best.



## *Congratulations*

The Managing Director & CEO of Union Bank of India **Sri Rajkiran Rai G.** has been elected as the Chairman of Indian Banks' Association (IBA). Bunts Sangha Bangalore congratulates him and wishes him all the best.

# ಅಭಿನಂದನೆಗಳು




ಎಂ.ಆರ್.ಜಿ ಗ್ರೂಪ್‌ನ ಚೇರ್‌ಮೆನ್ ಹಾಗೂ ಬೆಂಗಳೂರು ಬಂಟರ ಸಂಘದ ಯೋಜನಾ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ. ಪ್ರಕಾಶ್ ಶೆಟ್ಟಿಯವರು ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ–II ಯೋಜನೆಗೆ ಒಂದು ಕೋಟಿ ರೂ.ಗಳ ದೇಣಿಗೆಯನ್ನು ನೀಡಿರುತ್ತಾರೆ. ಇವರಿಗೆ ಬಂಟರ ಸಂಘದ ಪರವಾಗಿ ತುಂಬು ಹೃದಯದ ಧನ್ಯವಾದಗಳು.

## ಮನವಿ



ಬಂಟ ಸಮುದಾಯವನ್ನು ಕೇಂದ್ರದ ಇತರೆ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ (OBC) ಸೇರಿಸುವಂತೆ ಮಾನ್ಯ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ಶ್ರೀ ಕೆ. ಜಯಪ್ರಕಾಶ್ ಹೆಗ್ಡೆಯವರಿಗೆ ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು ಮನವಿಯನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

# ಅಭಿನಂದನೆಗಳು



ಕರ್ನಾಟಕ ಸರಕಾರದ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿ ಕರ್ನಾಟಕ ಸರಕಾರದ ಮಾಜಿ ಸಚಿವ, ಮಾಜಿ ಸಂಸದ **ಶ್ರೀ ಕೆ. ಜಯಪ್ರಕಾಶ್ ಹೆಗ್ಡೆಯವರು** ನೇಮಕಗೊಂಡಿರುತ್ತಾರೆ. ಇವರಿಗೆ ಬಂಟರ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು.

# ಅಭಿನಂದನೆಗಳು




ಸಂಘದ ಹಿರಿಯ ಸದಸ್ಯರಾದ **ಶ್ರೀಯುತ ಜಯಪ್ರಸಾದ್ ಶೆಟ್ಟಿ ಇರ್ಮಾಡಿಯವರು** ಮೈಸೂರು ಮೃಗಾಲಯದ ಪ್ರಾಣಿ ಪಕ್ಷಿಗಳ ಆಹಾರ ಪೂರೈಕೆಗಾಗಿ ದಿನಾಂಕ 02.05.2020ರಂದು ಒಂದು ಲಕ್ಷ ರೂಪಾಯಿಯನ್ನು ಚೆಕ್ ಮೂಲಕ ಮಾನ್ಯ ಮೈಸೂರು ಜಿಲ್ಲಾ ಉಸ್ತುವಾರಿ ಹಾಗೂ ಸಹಕಾರ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರಿಗೆ ನೀಡಿರುತ್ತಾರೆ. ಬಂಟರ ಸಂಘದ ಪರವಾಗಿ ಇವರಿಗೆ ಅಭಿನಂದನೆಗಳು.



# ಅಭಿನಂದನೆಗಳು

ಡಾ. ಮಾಲತಿ ಶೆಟ್ಟಿ ಮಣೂರು ಇವರು ಮಂಗಳೂರು ತಾಲೂಕು ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ ಇದರ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಇವರಿಗೆ ಬಂಟರ ಸಂಘದ ಪರವಾಗಿ ಅಭಿನಂದನೆಗಳು.

# ಅಭಿನಂದನೆಗಳು




**ಡಾ। ಬಿ.ಎಂ. ಹೆಗ್ಡೆಯವರಿಗೆ ಭಾರತ ಸರ್ಕಾರದಿಂದ ಪ್ರತಿಷ್ಠಿತ ಪದ್ಮವಿಭೂಷಣ ಪ್ರಶಸ್ತಿ.** ಉಡುಪಿಯ ಬೆಳ್ಳೆ ಗ್ರಾಮದಲ್ಲಿ ಜನಿಸಿದ ಇವರು ಉಡುಪಿಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ ಮದ್ರಾಸು ವಿಶ್ವವಿದ್ಯಾನಿಲಯದಿಂದ ಎಂ.ಬಿ.ಬಿ.ಎಸ್, ಲಕ್ನೋ ವಿಶ್ವವಿದ್ಯಾನಿಲಯದಿಂದ ಎಂ.ಡಿ ಪದವಿಯನ್ನು ಗಳಿಸಿದರು. ಬಳಿಕ ಉನ್ನತ ವೈದ್ಯಕೀಯ ಶಿಕ್ಷಣಕ್ಕೆ ಇಂಗ್ಲೆಂಡ್ ತೆರಳಿದ್ದರು. ಅಲ್ಲಿರುವ ರಾಯಲ್ ಕಾಲೇಜುಗಳ ಫೆಲೋ ಆದ ಪ್ರಥಮ ಹಾಗೂ ಏಕೈಕ ಕನ್ನಡಿಗ ಮತ್ತು ಭಾರತೀಯ ಎನಿಸಿಕೊಂಡರು. ನೋಬಲ್ ಪ್ರಶಸ್ತಿ ಪುರಸ್ಕೃತ ಬೆರ್ನಾರ್ಡ್ ಲೋವ್ನ್ ಸೇರಿದಂತೆ ವಿಶ್ವವಿಖ್ಯಾತ ವೈದ್ಯರ ಜತೆ ಕೆಲಸ ಮಾಡಿರುವ ಹೆಗ್ಗಳಿಕೆ ಅವರದ್ದು. ಮಣಿಪಾಲ ಕಸ್ತೂರ್ಬಾ ವೈದ್ಯಕೀಯ ವಿಶ್ವವಿದ್ಯಾನಿಲಯದಲ್ಲಿ ಪ್ರಾಚಾರ್ಯರಾಗಿ, ಡೀನ್ ಆಗಿ, ಮಾಹೆ ಉಪಕುಲಪತಿಯಾಗಿ ಸೇವೆ ಸಲ್ಲಿಸಿದ್ದಾರೆ. ದೇಶದ ಅನೇಕ ರಾಜ್ಯಗಳು ಆರೋಗ್ಯ ಸೇವೆ ವಿಸ್ತರಣೆ ಬಗ್ಗೆ ಇವರ ಸಲಹೆಗಳನ್ನು ಪಡೆದಿವೆ. ಡಾ। ಹೆಗ್ಡೆ ಅವರಿಗೆ 2010ರಲ್ಲಿ ಭಾರತ ಸರಕಾರ ನೀಡುವ ಪ್ರತಿಷ್ಠಿತ ಪದ್ಮಭೂಷಣ ಪ್ರಶಸ್ತಿಯೂ ಲಭಿಸಿತ್ತು.

ಈ ವರ್ಷ ದೇಶದ ಎರಡನೇ ಅತ್ಯುನ್ನತ ಪ್ರಶಸ್ತಿ ಪದ್ಮವಿಭೂಷಣ ಇವರಿಗೆ ಲಭಿಸಿರುವುದು ಬಂಟ ಸಮುದಾಯದ ನಮ್ಮೆಲ್ಲರಿಗೂ ಹೆಮ್ಮೆಯ ವಿಷಯ. ಬೆಂಗಳೂರು ಸಂಘದ ಸರ್ವ ಸದಸ್ಯರ ಪರವಾಗಿ ಡಾ। ಹೆಗ್ಡೆಯವರಿಗೆ ಅಭಿನಂದನೆಗಳು.

# ಅಂಭಿನಂದನೆಗಳು



ಕತಾರ್‌ನ ಪ್ರತಿಷ್ಠಿತ ಸಂಘಟನೆಯಾದ ಬಂಟ್ಸ್ ಕತಾರ್‌ನ ನೂತನ ಹಾಗೂ ಪ್ರಥಮ ಮಹಿಳಾ ಅಧ್ಯಕ್ಷರಾಗಿ ಡಾ. ಪದ್ಮಶ್ರೀ ಶೆಟ್ಟಿಯವರು ಆಯ್ಕೆಯಾಗಿದ್ದಾರೆ. ಡಾ. ಪದ್ಮಶ್ರೀ ಅವರು ಕತಾರ್‌ನ ನಾನಾ ಸಂಘಟನೆಗಳಲ್ಲಿ ಸಕ್ರಿಯರಾಗಿ ತನ್ನನ್ನು ತೊಡಗಿಸಿಕೊಂಡು, ಸಮಾಜ ಸೇವೆ ಮಾಡಿಕೊಂಡು ಬರುತ್ತಿದ್ದಾರೆ. ದಂತ ವೈದ್ಯರಾಗಿ ವೃತ್ತಿ ಜೀವನ ನಡೆಸುತ್ತಿರುವ ಅವರು ಮಂಗಳೂರು ಎ.ಬಿ. ಶೆಟ್ಟಿ ದಂತ ವೈದ್ಯಕೀಯ ಕಾಲೇಜಿನ ಹಳೆಯ ವಿದ್ಯಾರ್ಥಿ. ಬಂಟರ ಸಂಘದ ಪರವಾಗಿ ತಮಗೆ ಅಭಿನಂದನೆಗಳು.



# ಅಭಿನಂದನೆಗಳು

ಆತಿಥ್ಯ ಕ್ಷೇತ್ರದಲ್ಲಿ ಶ್ರಮಪೂರ್ಣ ಅತ್ಯುನ್ನತ ಸಾಧನೆಗೈದು ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಕೀರ್ತಿಗೆ ಭಾಜನರಾಗಿ ಈಗ ಭಾರತೀಯ ವ್ಯವಹಾರಗಳ ಭವಿಷ್ಯದ ದೂರಗಾಮಿ ನಾಯಕರೆಂಬ ಪ್ರಶಸ್ತಿಗೆ ಆಯ್ಕೆಯಾದ ಎಂ.ಆರ್.ಜಿ. ಗ್ರೂಪ್‌ನ ಚೇರ್‌ಮನ್ ಶ್ರೀ ಕೆ. ಪ್ರಕಾಶ್ ಶೆಟ್ಟಿಯವರಿಗೆ ಬಂಟರ ಸಂಘದ ಪರವಾಗಿ ಹೃದಯಾಂತರಾಳದ ಅಭಿನಂದನೆಗಳು.

## ಸಂಘದ ವಿವಿಧ ಉಪ ಸಮಿತಿಗಳ ವತಿಯಿಂದ ನಡೆದ ವೆಬಿನಾರ್‌ಗಳು

ಡಾ. ವೈ ಉಮಾನಾಥ ಶೆಟ್ಟಿಯವರು ಚೇರ್‌ಪರ್ಸನ್‌ರಾಗಿರುವ ಯುವ ವಿಭಾಗದ ವತಿಯಿಂದ ದಿನಾಂಕ 01.11.2020ರಂದು ನಡೆದ ವೆಬಿನಾರ್‌ನಲ್ಲಿ ಡಾ. ರಾಬರ್ಟ್ ಕ್ಲೈವ್‌ರವರು ಮಾನಸಿಕ ಅಡೆತಡೆ ಆತಂಕದಿಂದ ಹೊರಬಂದು ಯಶಸ್ವಿ ಜೀವನದೆಡೆಗೆ ಎಂಬ ವಿಷಯದ ಬಗ್ಗೆ ಮಾತನಾಡಿದರು.

ಶ್ರೀಮತಿ ತಾರಾಮಣಿ ಹೆಗ್ಡೆಯವರು ಚೇರ್‌ಪರ್ಸನ್‌ರಾಗಿರುವ ವಿವಾಹ ವೇದಿಕೆ ಸಮಿತಿ ವತಿಯಿಂದ ದಿನಾಂಕ 07.11.2020ರಂದು ನಡೆದ ವೆಬಿನಾರ್‌ನಲ್ಲಿ ರೂಪಾ ಐಯ್ಯರ್ ಶ್ರೀವತ್ಸರವರು "ಋಣಾನುಬಂಧ ರೂಪೇಣ" ಎಂಬ ವಿಷಯದ ಬಗ್ಗೆ ಮಾತನಾಡಿದರು.

ಶ್ರೀಮತಿ ಸುರೇಖ ಶೆಟ್ಟಿಯವರು ಚೇರ್‌ಪರ್ಸನ್‌ರಾಗಿರುವ ಮಾನವ ಸಂಪನ್ಮೂಲ ಮತ್ತು ಉದ್ಯೋಗ ಮಾಹಿತಿ ವಿಭಾಗ ವತಿಯಿಂದ ದಿನಾಂಕ 20.09.2020ರಂದು ನಡೆದ ವೆಬಿನಾರ್‌ನಲ್ಲಿ ಪ್ರೊ. ರಾಜೇಶ್ ಶ್ರೀವತ್ಸರವರು "The New Rules of Business" ಎಂಬ ವಿಷಯದ ಬಗ್ಗೆ ಮಾತನಾಡಿದರು.

ಶ್ರೀ ಮುರಲೀಧರ ಹೆಗ್ಡೆಯವರು ಚೇರ್‌ಪರ್ಸನ್‌ರಾಗಿರುವ ಸಾಹಿತ್ಯ ಮತ್ತು ಪ್ರಕಾಶನ ಸಮಿತಿ ವತಿಯಿಂದ ದಿನಾಂಕ 20.10.2020ರಂದು ನಡೆದ ವೆಬಿನಾರ್‌ನಲ್ಲಿ ಶ್ರೀ ನಾಗತಿಹಳ್ಳಿ ಚಂದ್ರಶೇಖರ್‌ರವರು ಪುಸ್ತಕಗಳೇ ನಮ್ಮ ಸಂಗಾತಿ ಎಂಬ ವಿಷಯದ ಬಗ್ಗೆ ಮಾತನಾಡಿದರು.

ಡಾ. ನಿಶಾಕಾಂತ್ ಶೆಟ್ಟಿಯವರು ಚೇರ್‌ಪರ್ಸನ್‌ರಾಗಿರುವ ವೈದ್ಯಕೀಯ ವಿಭಾಗದ ವತಿಯಿಂದ ದಿನಾಂಕ 09.10.2020ರಂದು ನಡೆದ ವೆಬಿನಾರ್‌ನಲ್ಲಿ ಡಾ. ಪ್ರಭಾಕರ ಶೆಟ್ಟಿ ಹೆಗ್ಗುಂಜೆಯವರು "Managing and Preventing Heart Disease" ಎಂಬ ವಿಷಯದ ಬಗ್ಗೆ ಮಾತನಾಡಿದರು.

ಸಂಘದ ವತಿಯಿಂದ ದಿನಾಂಕ 16.08.2020ರಂದು ನಡೆದ ವೆಬಿನಾರ್‌ನಲ್ಲಿ ಡಾ. ಬಿ.ಎಂ ಹೆಗ್ಡೆಯವರು ಕೊರೋನಾ ಬಗ್ಗೆ ಭಯ ಬೇಡ, ಮುಂಜಾಗ್ರತೆಯಿರಲಿ ಎಂಬ ವಿಷಯದ ಬಗ್ಗೆ ಮಾತನಾಡಿದರು. ಹಾಗೂ ದಿನಾಂಕ 20.08.2020ರಂದು ನಡೆದ ವೆಬಿನಾರ್‌ನಲ್ಲಿ ಶ್ರೀ ವಿವೇಕ್ ಶೆಟ್ಟಿಯವರು "Subconscious Mind Management" ಎಂಬ ವಿಷಯದ ಬಗ್ಗೆ ಮಾತನಾಡಿದರು.

ಈ ಎಲ್ಲಾ ವೆಬಿನಾರ್‌ಗಳಲ್ಲಿ ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಅನೇಕ ಸದಸ್ಯರು ಭಾಗವಹಿಸಿದ್ದರು.

## Life Time Achievement Award



Foundation for Advanced Training in Plant Breeding conferred life time achievement award to **Dr. Satish Rai** for his outstanding contribution in the area of plant breeding on 9th January 2020 at University of Agricultural Sciences, Dharwad. Dr. Satish Rai was responsible for developing a very strong breeding programme at Pioneer over last 25 years.

# ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ

ಆತ್ಮೀಯ ಸಮಾಜ ಬಾಂಧವರೇ,

ಸಂಘದ 2020–21 ನೇ ಸಾಲಿನ ಈ ಕೆಳಗಿನ ವಿವಿಧ ದತ್ತಿ ನಿಧಿ ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸುತ್ತಿದ್ದೇವೆ.

1. ಶ್ರೀ ಸಿ.ಎಲ್. ನಾಯಕ್ ಸ್ಮಾರಕ ಪ್ರಶಸ್ತಿ – 'ಅತ್ಯುತ್ತಮ ಇಂಜಿನೀಯರಿಂಗ್ ವಿದ್ಯಾರ್ಥಿ'
2. ಡಾ. ಕೆ.ಕೆ. ಹೆಗ್ಡೆ ಸ್ಮಾರಕ ಪ್ರಶಸ್ತಿ – 'ಅತ್ಯುತ್ತಮ ವೈದ್ಯಕೀಯ ವಿದ್ಯಾರ್ಥಿ'
3. ಶ್ರೀ ಮುಲ್ಕಿ ಸುಂದರರಾಂ ಶೆಟ್ಟಿ ಸ್ಮಾರಕ ಪ್ರಶಸ್ತಿ – 'ಅತ್ಯುತ್ತಮ ವಾಣಿಜ್ಯ ವಿದ್ಯಾರ್ಥಿ'
4. ಶ್ರೀ ಅಮ್ಮಣ್ಣಿ ರಾಮಣ್ಣ ಶೆಟ್ಟಿ ಸ್ಮಾರಕ ಪ್ರಶಸ್ತಿ – 'ಅತ್ಯುತ್ತಮ ಸರ್ವತೋಮುಖ ಪ್ರತಿಭಾನ್ವಿತ ವಿದ್ಯಾರ್ಥಿನಿ'
5. ಶ್ರೀ ಚಾರ್ಮಕ್ಕಿ ನಾರಾಯಣ ಶೆಟ್ಟಿ ಪ್ರಶಸ್ತಿ – 'ಅತ್ಯುತ್ತಮ ಕಾನೂನು ವಿದ್ಯಾರ್ಥಿ'
6. ಶ್ರೀಮತಿ ಅಕ್ಕಯ್ಯ ಎನ್. ಶೆಟ್ಟಿ ಪ್ರಶಸ್ತಿ – 'ಅತ್ಯುತ್ತಮ ದಂತ ವೈದ್ಯಕೀಯ ವಿದ್ಯಾರ್ಥಿ'
7. ಶ್ರೀ ಕೆ.ಪಿ. ರಾಮಣ್ಣ ಶೆಟ್ಟಿ ಪ್ರಶಸ್ತಿ – ಅತ್ಯುತ್ತಮ ಬಿ.ಎಸ್ಸಿ. (ಕೃಷಿ)/ ಪಿ.ಯು.ಸಿ. (ವಿಜ್ಞಾನ) ವಿದ್ಯಾರ್ಥಿ
8. ಶ್ರೀ ಎಚ್.ಟಿ. ಭಂಡಾರಿ ಪ್ರಶಸ್ತಿ – 'ಅತ್ಯುತ್ತಮ ಕ್ರೀಡಾ ವಿದ್ಯಾರ್ಥಿ'
9. ಶ್ರೀ ಪಿ.ಎಸ್. ತಿಮ್ಮಪ್ಪ ಶೆಟ್ಟಿ ಸ್ಮಾರಕ ಪ್ರಶಸ್ತಿ – ಯಾವುದೇ ಕ್ಷೇತ್ರದಲ್ಲಿನ ಉನ್ನತ ಸಾಧನೆಗಾಗಿ
10. ಶೀತಲ್ ಕೃಷ್ಣಪ್ಪ ಸ್ಮಾರಕ ಪ್ರಶಸ್ತಿ – 'ವಿವಿಧ ಕ್ಷೇತ್ರದಲ್ಲಿನ ಸರ್ವತೋಮುಖ ಪ್ರತಿಭೆ' ಗಾಗಿ (ವಿದ್ಯಾರ್ಥಿನಿ)
11. ಮಾಸ್ಟರ್ ಜಯಶೀಲ್ ಜಿ. ಶೆಟ್ಟಿ ಸ್ಮಾರಕ ಪ್ರಶಸ್ತಿ – 'ಅತ್ಯುತ್ತಮ ಬಿ.ಇ.' (ಎಲೆಕ್ಟ್ರಾನಿಕ್ಸ್) ಅಥವಾ ಇತರೆ ವಿಷಯದಲ್ಲಿ 'ಇಂಜಿನಿಯರಿಂಗ್ ಪದವಿ'
12. ರಕ್ಷಾ ರೈ ಸ್ಮಾರಕ ಪ್ರಶಸ್ತಿ – 'ಶಾಸ್ತ್ರೀಯ ಸಂಗೀತ'ದಲ್ಲಿ ವಿಶೇಷ ಸಾಧನೆಗಾಗಿ
13. ಮುಲ್ಲಡ್ ಲಕ್ಷ್ಮೀ ಶೀನಪ್ಪ ಶೆಟ್ಟಿ ಪ್ರಶಸ್ತಿ – 'ಅತ್ಯುತ್ತಮ ಪಶು ವಿಜ್ಞಾನ ವಿದ್ಯಾರ್ಥಿ' ಅಥವಾ 'ಪಶುವಿಜ್ಞಾನ ಕ್ಷೇತ್ರದಲ್ಲಿನ ವಿಶೇಷ ಸಾಧನೆಗಾಗಿ
14. ಶ್ರೀಮತಿ ಕೆಂಜೂರು ನಾಯ್ಕರ ಮನೆ ದೊಡ್ಡಕ್ಕ ಅನಂತ ಶೆಟ್ಟಿ ಸ್ಮಾರಕ ಪ್ರಶಸ್ತಿ – 'ಅತ್ಯುತ್ತಮ ವೈದ್ಯಕೀಯ ವಿದ್ಯಾರ್ಥಿನಿ'
15. ಶ್ರೀ ಮಾರಾಳಿಮನೆ ಅನಂತ್ ಶೆಟ್ಟಿ ಸ್ಮಾರಕ ಪ್ರಶಸ್ತಿ – 'ಅತ್ಯುತ್ತಮ ನೇತ್ರ ವೈದ್ಯ' ಅಥವಾ 'ಯಾವುದೇ ವೈದ್ಯಕೀಯ ವಿಭಾಗದಲ್ಲಿ ಸ್ನಾತಕೋತ್ತರ ಪದವಿ'
16. ರಕ್ಷಾ ಎಂ. ಶೆಟ್ಟಿ ಸ್ಮಾರಕ ಪ್ರಶಸ್ತಿ – 'ಶಾಸ್ತ್ರೀಯ ನೃತ್ಯ' ದಲ್ಲಿನ ವಿಶೇಷ ಸಾಧನೆಗಾಗಿ
17. ಶ್ರೀ ಮೋಹನ್‌ದಾಸ್ ಎನ್. ಹೆಗ್ಡೆ ಸ್ಮಾರಕ ಪ್ರಶಸ್ತಿ – 'ಅತ್ಯುತ್ತಮ ಕಾನೂನು ವಿದ್ಯಾರ್ಥಿ'
18. ಶ್ರೀ ನಿಡ್ಡೋಡಿ ಪ್ರೇಮದಾಸ್ ಶೆಟ್ಟಿ ಸ್ಮಾರಕ ಪ್ರಶಸ್ತಿ – ' ಗ್ರಾಮೀಣ ಪ್ರತಿಭಾನ್ವಿತ ವಿದ್ಯಾರ್ಥಿ'
19. ಕೊಳ್ಕೆಬೈಲ್ ನಡುಮನೆ ಶ್ರೀಮತಿ ವನಜಾಕ್ಷಿ ಕರುಣಾಕರ ಶೆಟ್ಟಿ ಸ್ಮಾರಕ ಪ್ರಶಸ್ತಿ – 'ಗ್ರಾಮೀಣ ಪ್ರತಿಭಾನ್ವಿತ ವಿದ್ಯಾರ್ಥಿನಿ'

20. ವಂಡಾರು ತೆಂಕಬೆಟ್ಟು ಬಾಲಕೃಷ್ಣ ಶೆಟ್ಟಿ ಸ್ಮಾರಕ ಪ್ರಶಸ್ತಿ – ವಾಣಿಜ್ಯ ವಿಷಯದಲ್ಲಿ ಪದವಿ ಗಳಿಸಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವ ಅತ್ಯುತ್ತಮ ವಿದ್ಯಾರ್ಥಿನಿ
21. ದಿ। ಡಾ। ಕೆ. ನಾಗಪ್ಪ ಆಳ್ವ ಮತ್ತು ದಿವಂಗತ ಶ್ರೀಮತಿ ಕಲ್ಯಾಣಿ ಆಳ್ವರವರ ಸ್ಮಾರಕ ಪ್ರಶಸ್ತಿ – ವಿಜ್ಞಾನ, ವಾಣಿಜ್ಯ, ಕಲಾ ವಿಭಾಗಗಳಲ್ಲಿನ ವಿಶೇಷ ಸಾಧನೆಗಾಗಿ
22. ದಿ। ಡಾ। ಕೆ. ನಾಗಪ್ಪ ಆಳ್ವ ಮತ್ತು ದಿವಂಗತ ಶ್ರೀಮತಿ ಕಲ್ಯಾಣಿ ಆಳ್ವರವರ ಸ್ಮಾರಕ ಪ್ರಶಸ್ತಿ – ಕಲೆ, ಸಂಗೀತ, ನೃತ್ಯ, ಯಕ್ಷಗಾನ, ನಾಟಕ ಇತ್ಯಾದಿ ವಿಭಾಗಗಳಲ್ಲಿ ವಿಶೇಷ ಸಾಧನೆಗಾಗಿ
23. ದಿ। ಡಾ। ನಾಗಪ್ಪ ಆಳ್ವ ಮತ್ತು ದಿವಂಗತ ಶ್ರೀಮತಿ ಕಲ್ಯಾಣಿ ಆಳ್ವರವರ ಸ್ಮಾರಕ ಪ್ರಶಸ್ತಿ – ಕ್ರೀಡೆ, ಯೋಗ ಕ್ಷೇತ್ರದಲ್ಲಿನ ವಿಶೇಷ ಸಾಧನೆಗಾಗಿ
24. ಶ್ರೀ ಕಿಶನ್ ಜಲಾಧರ ಶೆಟ್ಟಿ ಪ್ರಶಸ್ತಿ – ಅತ್ಯುತ್ತಮ ಮ್ಯಾನೇಜ್‌ಮೆಂಟ್ ವಿದ್ಯಾರ್ಥಿ ಅಥವಾ ಯಾವುದೇ ಕ್ಷೇತ್ರದಲ್ಲಿನ ಉನ್ನತ ಸಾಧನೆಗಾಗಿ
25. ಮಹಿಳಾ ವಿಭಾಗ ರಜತ ಸಂಭ್ರಮ ಸ್ಮಾರಕ ಪ್ರಶಸ್ತಿ – ಎಸ್.ಎಸ್.ಎಲ್.ಸಿ/ 10ನೇ ತರಗತಿಯಲ್ಲಿ ಅತೀ ಹೆಚ್ಚು ಅಂಕಗಳಿಸಿರುವ ಅತ್ಯುತ್ತಮ ವಿದ್ಯಾರ್ಥಿನಿ
26. ಮಹಿಳಾ ವಿಭಾಗ ರಜತ ಸಂಭ್ರಮ ಸ್ಮಾರಕ ಪ್ರಶಸ್ತಿ – ದ್ವಿತೀಯ ಪಿಯುಸಿ/ 12ನೇ ತರಗತಿಯಲ್ಲಿ ಅತೀ ಹೆಚ್ಚು ಅಂಕಗಳಿಸಿರುವ ಅತ್ಯುತ್ತಮ ವಿದ್ಯಾರ್ಥಿನಿ
27. ದಿ. ಸೂಡ ಸಂಜೀವ ಶೆಟ್ಟಿ ಹಾಗೂ ದಿ. ಸರೋಜಿನಿ ಸಂಜೀವ ಶೆಟ್ಟಿ ಸ್ಮಾರಕ ನಗದು ಪ್ರಶಸ್ತಿ – ಪಿಯುಸಿ, ಪದವಿ ಅಥವಾ ಇನ್ಯಾವುದೇ ವೃತ್ತಿಪರ ಶಿಕ್ಷಣ ಪಡೆಯುತ್ತಿರುವ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿ (3 ಪ್ರಶಸ್ತಿಗಳು)
28. ದಿ। ಶಕ್ತೀಶ್ ಶೆಟ್ಟಿ ಸ್ಮಾರಕ ಪ್ರತಿಭಾ ಪುರಸ್ಕಾರ – ಪಿ.ಯು.ಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸುವ ಪ್ರತಿಭಾನ್ವಿತ ವಿದ್ಯಾರ್ಥಿನಿ. (4 ಪ್ರಶಸ್ತಿಗಳು)
29. ದಿ। ಕೆ. ಎಸ್ ಹರ್ಷವರ್ಧನ್ ಶೆಟ್ಟಿ ಸ್ಮಾರಕ ಪ್ರಶಸ್ತಿ – ಪಿ.ಯು.ಸಿ, ಪದವಿ ಅಥವಾ ಇನ್ಯಾವುದೇ ಶಿಕ್ಷಣ ಪಡೆಯುತ್ತಿರುವ ತಂದೆಯನ್ನು ಕಳೆದುಕೊಂಡಿರುವ ವಿದ್ಯಾರ್ಥಿ – (2 ಪ್ರಶಸ್ತಿಗಳು)

ಪ್ರಸಕ್ತ ಸಾಲಿನಲ್ಲಿ ಶಿಕ್ಷಣವನ್ನು ಪೂರೈಸಿದ ಈ ಮೇಲಿನ ಯಾವುದೇ ಪ್ರಶಸ್ತಿಗೆ ಆಸಕ್ತ ಅರ್ಹ ಅಭ್ಯರ್ಥಿಗಳು ಸ್ನೇಹಚಿಂತನೆಯಲ್ಲಿ ಪ್ರಕಟಿಸಿರುವ ಅರ್ಜಿ ನಮೂನೆಯನ್ನು (ಪುಟ ಸಂ. 51) ಭರ್ತಿಮಾಡಿ, ಅಗತ್ಯ ದಾಖಲೆಗಳೊಂದಿಗೆ ದಿನಾಂಕ 28.02.2021 ರ ಒಳಗಾಗಿ ಸಂಘದ ಕಛೇರಿಗೆ ಅರ್ಜಿ ಸಲ್ಲಿಸಲು ಕೋರಲಾಗಿದೆ.

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ


**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

**ಉದಯ ಶೆಟ್ಟಿ**
ಸಂಚಾಲಕರು

**ಪ್ರವೀಣ್‌ಚಂದ್ರ ಶೆಟ್ಟಿ**
ಚೇರ್‌ಪರ್ಸನ್

**ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ**

# ಡಾ. ಆರ್.ಎನ್. ಶೆಟ್ಟಿಯವರಿಗೆ ನುಡಿನಮನ




ದಿನಾಂಕ 17.12.2020ರಂದು ನಮ್ಮನ್ನಗಲಿದ ಬಂಟರ ಸಂಘದ ಡೋನರ್ ಟ್ರಸ್ಟಿ, ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನದ ಚೇರ್‌ಮೆನ್, ಬಂಟ ಸಮುದಾಯದ ಹೆಮ್ಮೆಯ ಉದ್ಯಮಿ, ಸಮಾಜ ಸೇವಕ, ಆರ್.ಎನ್.ಎಸ್ ಸಮೂಹ ಸಂಸ್ಥೆಗಳ ಸಂಸ್ಥಾಪಕರಾದ ಡಾ। ಆರ್.ಎನ್ ಶೆಟ್ಟಿಯವರಿಗೆ ದಿನಾಂಕ 27.12.2020ರಂದು ಬೆಂಗಳೂರು ಬಂಟರ ಸಂಘದಲ್ಲಿ ನುಡಿನಮನ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಬಂಟರ ಸಂಘದ ಪ್ರಮುಖ ದಾನಿಗಳಾದ, ಬೆಂಗಳೂರು ಬಂಟರ ಸಂಘದ ಯೋಜನಾ ಸಮಿತಿಯ ಅಧ್ಯಕ್ಷರು ಹಾಗೂ ಎಂ.ಆರ್.ಜಿ ಗ್ರೂಪ್‌ನ ಚೇರ್‌ಮೆನ್‌ರಾದ ಶ್ರೀ ಕೆ. ಪ್ರಕಾಶ್ ಶೆಟ್ಟಿಯವರು ಮಾತನಾಡಿ ದಿವಂಗತ ಆರ್.ಎನ್. ಶೆಟ್ಟಿಯವರೊಂದಿಗಿನ ಆತ್ಮೀಯತೆ, ಅವರ ಕಾರ್ಯವೈಖರಿ ಹಾಗೂ ಆದರ್ಶಗಳನ್ನು ನೆನಪಿಸಿ ನಮ್ಮ ಸಂಘಕ್ಕೆ, ಸಮುದಾಯಕ್ಕೆ ಅವರು ನೀಡಿದ ಕೊಡುಗೆಗಳನ್ನು ಸ್ಮರಿಸಿದರು. ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನದ ಆಡಳಿತ ಮಂಡಳಿಯ ಸದಸ್ಯರು ಹಾಗೂ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎನ್. ಆರ್. ಶೆಟ್ಟಿಯವರು ಮಾತನಾಡಿ ದಿವಂಗತ ಆರ್.ಎನ್. ಶೆಟ್ಟಿಯವರೊಂದಿಗಿನ ಒಡನಾಟವನ್ನು ಸ್ಮರಿಸಿದರು. ಇನ್ನೋರ್ವ ಶಾಲಾಡಳಿತ ಮಂಡಳಿಯ ಸದಸ್ಯರಾದ ಶ್ರೀ ಬಿ.ಎನ್. ಶೆಟ್ಟಿಯವರು, ಸಂಘದ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಡಿ. ಚಂದ್ರಹಾಸ ರೈಯವರು, ಮಾಜಿ ಅಧ್ಯಕ್ಷರಾದ ಶ್ರೀ ಹರೀಶ್ ಕುಮಾರ್ ಶೆಟ್ಟಿಯವರು, ಮಾಜಿ ಗೌರವ ಕಾರ್ಯದರ್ಶಿಯವರಾದ ಶ್ರೀ ಎ.ಎನ್. ಶೆಟ್ಟಿಯವರು ಮಾತನಾಡಿ ದಿವಂಗತ ಆರ್.ಎನ್. ಶೆಟ್ಟಿಯವರ ಆದರ್ಶ ಮತ್ತು ಕೊಡುಗೆಯನ್ನು ಸ್ಮರಿಸಿದರು.

ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು ಮಾತನಾಡಿ ಮಾರ್ಗದರ್ಶಕ ಹಾಗೂ ದಾನಿಗಳಾದ ಡಾ. ಆರ್.ಎನ್. ಶೆಟ್ಟಿಯವರು ನಮಗೆಲ್ಲರಿಗೂ ಆದರ್ಶಪ್ರಿಯರಾಗಿದ್ದು, ನಾಯಕತ್ವ ಮತ್ತು ಸಮಾಜ ಸೇವೆಯ ಗುಣವನ್ನು ಮೈಗೂಡಿಸಿಕೊಂಡಿದ್ದು ಅವರ ಬಹುಮುಖಿ ವ್ಯಕ್ತಿತ್ವ ನಮ್ಮಲ್ಲಿ ಹಚ್ಚಹಸುರಾಗಿ ಉಳಿಯುತ್ತದೆ ಎಂದರು.


ಪ್ರಾಸ್ತಾವಿಕ ನುಡಿಗಳನ್ನಾಡಿದ ಗೌರವ ಕಾರ್ಯದರ್ಶಿ ಶ್ರೀ ಮಧುಕರ ಎಂ. ಶೆಟ್ಟಿಯವರು ಸಂಘ ಮತ್ತು ಸಮುದಾಯಕ್ಕೆ ದಿವಂಗತ ಆರ್.ಎನ್ ಶೆಟ್ಟಿಯವರು ನೀಡಿದ ಕೊಡುಗೆ ಅಮೂಲ್ಯವಾದುದೆಂದರು.

ಸಂಘದ ಕೋಶಾಧಿಕಾರಿಗಳಾದ ಶ್ರೀ ದೀಪಕ್ ಶೆಟ್ಟಿಯವರು ಅಚ್ಚುಕಟ್ಟಾಗಿ ನಿರೂಪಿಸಿದ ಈ ಕಾರ್ಯಕ್ರಮದಲ್ಲಿ ಸಂಘದ ಪದಾಧಿಕಾರಿಗಳು, ಮಾಜಿ ಅಧ್ಯಕ್ಷರುಗಳು, ಮಾಜಿ ಗೌರವ ಕಾರ್ಯದರ್ಶಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನದ ಶಿಕ್ಷಕ ವೃಂದದವರು, ಸಿಬ್ಬಂದಿ ವರ್ಗದವರು ಹಾಗೂ ಸಂಘದ ಅನೇಕ ಸದಸ್ಯರು ಭಾಗವಹಿಸಿ ದಿವಂಗತ ಡಾ. ಆರ್.ಎನ್. ಶೆಟ್ಟಿಯವರ ಭಾವಚಿತ್ರಕ್ಕೆ ಪುಷ್ಪ ನಮನವನ್ನು ಸಲ್ಲಿಸಿದರು.

# ACADEMIC EXCELLENCE

## *Congratulations!*

## SSLC/10th Std. Toppers



**Sithij Shetty**
S/o Sudeep Shetty & Shami Shetty K.
ICSE- 98.80%
History & Civics-100, Com. Appli.- 100
Carmel School, Bangalore



**Amulya D.**
D/o Devendra Kumar Shetty & Jayasheela
SSLC- 98.72% Hindi-100, Maths - 100
Priyadarshini Vidyakendra,
Kengeri, Satalite Town
**8th Rank in State**




**Kushi H. Shetty**
D/o Harish S. Shetty & Sujaya H. Shetty
SSLC- 98.40% Kannada-100, Hindi-100
Vishwabharathi Public School,
Vinayaka Lyt, Nayandanahalli, Bangalore



**Vaishnavi B. Shetty**
D/o Bhojaraj Shetty & Mamatha B.Shetty
SSLC- 98.08%
Hindi-100, Maths-100
Christ School, Bangalore



**Akshatha S.**
D/o Y. S. Srinivas Shetty & Sumithra S. Shetty
SSLC- 98.08%
Sanskrit-125, Kannada-100
Shanthinikethan Educational Institution,
Bilekahalli



**Pancham Rai**
S/o Prabhash Rai & Priya Rai
SSLC- 97.44%
English-100
Widia Poornaprajna School,
Nagasandra



**Athmi Rai**
D/o Jayaram Rai & Prathibha Rai
ICSE- 97.40% - History & Civics -100
Physical Education-100
Podar International School,
Basavanapura Bangalore



**Mithali S. Shetty**
D/o Subhaschandra Shetty &
Jyothi S. Shetty
SSLC - 97.12%, Sanskrit -125
Carmel Convent High School,
Jayanagar



**Sowjanya Rai**
D/o Jayaprakash Rai &
Sandhya Rai
ICSE- 96.80%
St. Francis School
Hongasandra, Bangalore



**Grisha Shetty**
D/o Srividya Shetty &
Pavithra Shetty
ICSE- 96.80% Hindi-100
St. Mary's Public School,
Bangalore



**Sushan Rai**
S/o Seetharam Rai N. & Sandya S. Rai
SSLC- 96.16%
Social Science -100
Sri Vidyamandira High School
Malleshwaram



**Eashan Shashidhar Rai**
S/o Shashidhar Rai & Prathima S. Rai
ICSE- 96.20%
Baldwin Co-Education Extension
High School, Bangalore



**Sukhi U. Shetty**
D/o Vinutha U. Shetty &
K. Udayaraj Shetty
CBSE-95.60%
Sri Vani Education CEN School
Bapagrama, Bangalore



**Manya Vilas Hegde**
D/o Vilas Hegde & Gayathri V. Hegde
ICSE- 95.60%
Presidency School,
R.T, Nagar, Bangalore



**Shubrath B. Shetty**
S/o Bhaskar Shetty &
Late Shakila B. Shetty
SSLC-95.36%
Kannada-100, Maths-100
Florence High School, Bangalore




**Anvika J. Shetty**
D/o Jyothi Shetty & Neethi Shetty
SSLC- 95.20%
Bethesda School,
Kumarapark West, Bangalore



**Aathmi K. Shetty**
D/o Karunakar Shetty & Geetha Shetty
SSLC- 95.20%
Social Science -100
Stella Maris High School



**Shravan A. Shetty**
S/o A. H. Ashok Shetty &
Bhavana Shetty
SSLC- 94.88%
Assumption English High School,
Rajajinagar



**Shrajan Kumar**
S/o Bhaskar Shetty & Malathi Shetty
ICSE- 94.80%
R.N.S Vidyaniketan,
Bangalore




**Sudhamshu K. Shetty**
S/o Krishna N. Shetty &
Rajashree K. Shetty
ICSE- 94.40%
Presidency School,
Nandini Layout, Bangalore




**Vidyashree H. Shetty**
D/o Heriyanna Shetty & Vinoda Shetty
SSLC- 94.40%
Holy Christ High School,
Jayanagar, Bangalore



**Ankitha S. Shetty**
D/o Sujay S. Shetty & Sushma S. Shetty
ICSE- 94%
Cluny Convent High School,
Bangalore



**Shabari N. Shetty**
D/o Sangeetha N. Shetty &
Nagaraja Shetty
CBSE- 93.60%
Rashtrotthana Vidya Kendra,
Bangalore



**Akash N.**
S/o Nagesh & Revathi
SSLC- 93.28%
Hindi-100
G.S English School, Bapujinagar



**Sanketh K. Shetty**
S/o K. Keshava Shetty &
Jayalakshmi K. Shetty
SSLC- 92.80%
Cordial High School
Bangalore



**Vrashank S. Shetty**
S/o Sudhakar Shetty &
Pranitha S. Shetty
ICSE- 92.40%
Lorven Public School, Bangalore



**Swara Shetty M.**
D/o Ravish Shetty &
Swarnalatha M.
ICSE- 92%
R.N.S. Vidyaniketan, Bangalore



**Prakyath Kumar Shetty**
S/o Prasanna Kumar Shetty &
Deepa P. Shetty
CBSE- 91%
Narayana E-Tech Sch
Kaggadasapura, Bangalore



**Aryav Hegde**
S/o Ajay Hegde & Usha Hegde
CBSE- 91%
Sanskrit-100
JSS Public School
Manasagangothri Mysore



**Ashi Shetty**
D/o Pradeep Shetty &
Anushree Shetty
ICSE- 90.40%
R.N.S. Vidyaniketan
Bangalore



**Seemith S. Shetty**
S/o Sudhakar Shetty &
Poornima Shetty
ICSE- 90.20%
R.N.S. Vidyaniketan,
Bangalore



**Kishore S. Shetty**
S/o Neethu S. Shetty &
Shashiraj P. Shetty
CBSE- 90%
National Pub Sch
Raghavendra Layout, Bangalore

# ACADEMIC EXCELLENCE
## *Congratulations!*
## PUC / 12th Std. Achievers




**Anvitha Shetty**
D/o Babu Shetty K. & Malathi
PUC (Com.)-98.66%
Sanskrit-100, Business Studies-100,
Statistics-100, Basic Maths-100
PES PU College, Hanumanthnagar Bangalore



**Anushka Alva**
D/o T.V. Rohan Alva &
Sachitha Alva
PUC (Sc.)-97.5%
MGM P.U. College Udupi



**Vandana Shetty**
D/o Pushparaj Shetty & Srividya Shetty
ISC(Sc.)-96.75%
Mathematics-100
Christ Academy, Bangalore



**Manank Shetty**
S/o Dr. Sandeep Shetty &
Dr. Shruthi Shetty
PUC (Com)-96%
Accountancy-100, Basic Maths-100
Christ College, Koramangala, Bangalore



**Mahi Sunil Shetty**
D/o Sunil V. Kumar &
Vasudha S. Shetty
ISC (Com.) - 95.50%
Sophia High School, Bangalore



**Sahaj C. Shetty**
S/o Chandrahasa &
Jayalakshmi C. Shetty
PUC(Sc.)-95%
BASE P.U. College Rajajinagar,
Bangalore



**Diksha Bhandary**
D/o Sudhir Bhandary & Yasha Bhandary
CBSE (Sc.)-94.8%
CMR National Public School,
Bangalore



**Srinidhi S. Shetty**
D/o Santhosh Shetty &
Bharathi S. Shetty
PUC (Sc.)-92.16%
ICBIO Mahesh PU College, Yelahanka



**Deepthi S. Shetty**
D/o Sharath Shetty M. &
Vijayalakshmi S. Shetty
PUC (Com)-91.83%
Bunts Sangha R.N.S Vidyaniketan



**Akanksha Ashok Shetty**
D/o Ashok S. Shetty & Malini A. Shetty
PUC (Sc.)-91.5%
S.G.P.T.A. P.U College,
Thyagarajnagar, Bangalore



**Achal Shetty U.**
S/o Chandrashekar Shetty U. & Asha Shetty
PUC (Sc.)-90.83%
Narayana P.U. College,
Bannerghatta, Bangalore



**Samyam Ganesh Shetty**
S/o Ganesh Shetty K. S. &
Sandhya G. Shetty
PUC (Sc.)-90.5%
Vidya Mandir Ind. Pre-University College




BUNTS` SANGHA RNS VIDYANIKETAN
Vijayanagar, Bangalore - 560040
SCHOOL TOPPERS
The Management, Principal & Staff Congratulate the Toppers in ICSE BOARD EXAM 2019-20
100% Result


BUNTS` SANGHA RNS VIDYANIKETAN
Vijayanagar, Bangalore - 560040
SCHOOL TOPPERS
100% Result
The Management, Principal & Staff Congratulate the Toppers in ICSE BOARD EXAM 2019-20


Creating life-long bonds
SINCE 18 Years
HOME FOR ALL
AVAIL THE BENEFITS OF
PMAY
PRADHAN MANTRI AWAS YOJANA
RERA Approved
READY TO OCCUPY
2BHK - 30 LAKH
COST INCLUDING GST & CAR PARKING
SAI MATHA GARDEN
Surathkal, Mangaluru.
NEAR TO BEACH & RAILWAY STATION
International Airport Road
Surathkal
1 MATHA Emerald
2 MATHA Opal
3 MATHA Ruby
4 MATHA Diamond
5 MATHA Pearl
6 MATHA Crystal
7 MATHA Sapphire
HIGHLIGHTS
• SUPER MARKET
• LIBRARY
• YOGA / MEDITATION HALL
• FULLY EQUIPPED GYMNASIUM
• CHILDREN'S SWIMMING POOL
• CHILDREN'S PLAY AREA
• OUTDOOR BADMINTON COURT
• SOLAR LIGHTING FOR YARD AND STREET
• RAIN WATER HARVESTING
• SEWAGE TREATMENT PLANT
• 24 HOURS BACKUP POWER SUPPLY
• COVERED SHEET ROOFING FOR TERRACE
Ongoing Projects : MUKKA, MULKY, PADUBIDRI
Project Approved in all Nationalized Bank
MATHA Builders & Developers
Developers Pvt. Ltd.
Surathkal: Thara Towers, 2nd Floor, International Airport Road, Surathkal, Mangaluru - 575 014.
Mumbai: Shop No. 8, Bldg. No. 1, New Venkateshwar Nagar, Cabin Road Bhayandar (E), Thane Dist - 401 105.
9980711966
7022481666
mathadevelopers108@gmail.com
www.mathadevelopers.com
CREDAI
7259209966
7259269966 (Mumbai)
Best Investment with Assured Rental Return

ADVT.

# ಭಾವಪೂರ್ಣ ಶ್ರದ್ಧಾಂಜಲಿ



## ಡಾ. ಆರ್. ಎನ್. ಶೆಟ್ಟಿ

ಜನನ: 15.08.1928 ನಿಧನ: 17.12.2020

ಬೆಂಗಳೂರು ಬಂಟರ ಸಂಘದ ಡೋನರ್ ಟ್ರಸ್ಟಿ, ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನದ ಆಡಳಿತ ಮಂಡಳಿಯ ಚೇರ್‌ಮೆನ್, ಖ್ಯಾತ ಉದ್ಯಮಿ, ಶಿಕ್ಷಣ ತಜ್ಞ, ಸಮಾಜ ಸೇವಕ, ಕೊಡುಗೈದಾನಿ, ಆರ್.ಎನ್. ಎಸ್ ಗ್ರೂಪ್ಸ್‌ನ ಸಂಸ್ಥಾಪಕರಾದ **ಡಾ. ಆರ್.ಎನ್ ಶೆಟ್ಟಿಯವರು** ದೈವಾಧೀನರಾಗಿರುವುದು ನಮ್ಮ ದೇಶ ಹಾಗೂ ಬಂಟ ಸಮುದಾಯಕ್ಕೆ ತುಂಬಲಾರದ ನಷ್ಟವಾಗಿದೆ.

ಮೃತರ ಆತ್ಮಕ್ಕೆ ಚಿರಶಾಂತಿ ದೊರಕಲಿ ಹಾಗೂ ಅವರ ಕುಟುಂಬದವರಿಗೆ ದುಃಖವನ್ನು ಸಹಿಸುವ ಶಕ್ತಿಯನ್ನು ಪರಮಾತ್ಮನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ.

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸರ್ವ ಸದಸ್ಯರು
ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ ಶಾಲಾಡಳಿತ ಮಂಡಳಿ ಸದಸ್ಯರು
ಬಂಟರ ಸಂಘ ಬೆಂಗಳೂರು

# ಭಾವಪೂರ್ಣ ಶ್ರದ್ಧಾಂಜಲಿ



## ಡಾ. ಕೈರುಝುರ್ ಟಿ. ಕಂಬ್ಳಿ

ನಿಧನ: 27.06.2020

ಖ್ಯಾತ ವೈದ್ಯ (ಯು.ಎಸ್.ಎ.), ಕೊಡುಗೈ ದಾನಿ, ಬೆಂಗಳೂರು ಬಂಟರ ಸಂಘದ ಡೋನರ್ ಟ್ರಸ್ಟಿ ಡಾ. ಕೈರುಝುರ್ ಟಿ. ಕಂಬ್ಳಿಯವರು ದೈವಾಧೀನರಾಗಿರುವುದು ನಮಗೆಲ್ಲರಿಗೂ ಅತ್ಯಂತ ದುಃಖವಾಗಿದೆ.

ಮೃತರ ಆತ್ಮಕ್ಕೆ ಚಿರಶಾಂತಿ ದೊರಕಲಿ ಹಾಗೂ ಅವರ ಕುಟುಂಬದವರಿಗೆ ದುಃಖವನ್ನು ಸಹಿಸುವ ಶಕ್ತಿಯನ್ನು ಪರಮಾತ್ಮನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ.

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸರ್ವ ಸದಸ್ಯರು
ಬಂಟರ ಸಂಘ ಬೆಂಗಳೂರು

# ಶ್ರದ್ಧಾಂಜಲಿ



## ಹೆಬ್ಬಾಡಿ ಗುಂಡಿಗದ್ದೆ ಮನೆ ಶ್ರೀ ಹೆಚ್. ಶಿವರಾಮ ಶೆಟ್ಟಿ

**ಹೋಟೆಲ್ ರಾಘವೇಂದ್ರ ವೈಭವ, ಮೂವಳ್ಳಿ ಬೆಂಗಳೂರು**

ದಿನಾಂಕ 10.07.2020ರಂದು
ದೈವಾಧೀನರಾದ ಮೃತರ ಆತ್ಮಕ್ಕೆ ಶಾಂತಿ ಕೋರುವ,

ದುಃಖತಪ್ತರು :
ಹಂದಾಡಿ ತೆಂಕುಬೆಟ್ಟು ಕೆಳಮನೆ ಶ್ರೀಮತಿ ಹೆಚ್. ರುದ್ರಮ್ಮ ಶೆಟ್ಟಿ (ಪತ್ನಿ)
ಮಕ್ಕಳು, ಮೊಮ್ಮಕ್ಕಳು, ಅಳಿಯ, ಸೊಸೆ

ADVT.

# ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಶಾಲಾ ಕಟ್ಟಡಕ್ಕೆ "ಶ್ರೀ ಐ.ಎಂ. ಜಯರಾಮ ಶೆಟ್ಟಿ" ಬ್ಲಾಕ್ – ನಾಮಕರಣ








ತನ್ನ ಸಮುದಾಯದ ಬಗೆಗೆ ಆಗಾಧ ಪ್ರೀತಿ ಹಾಗೂ ಅಭಿಮಾನ ಹೊಂದಿರುವ ವ್ಯಕ್ತಿಯಿಂದ ಮಾತ್ರವೇ ಯಾವುದೇ ಸಮುದಾಯ ಏಳಿಗೆ ಸಾಧ್ಯ. ಬೆಂಗಳೂರು ಬಂಟರ ಸಂಘದ ಪ್ರತಿನಿಧಿಗಳಾಗಿ ನಮ್ಮ ಸಂಘದ ಏಳಿಗೆಗೆ ಹಲವಾರು ಹಿರಿಯರು ತಮ್ಮ ನಿಸ್ವಾರ್ಥ ಸೇವೆಯನ್ನು ಸಲ್ಲಿಸಿರುತ್ತಾರೆ. 2001–2004 ರ ಅವಧಿಯಲ್ಲಿ ಬೆಂಗಳೂರು ಬಂಟರ ಸಂಘದ ಅಧ್ಯಕ್ಷರಾಗಿ ಸಂಘವನ್ನು ಮುನ್ನಡೆಸಿ ಸಂಘಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಿದ ಮೇರು ವ್ಯಕ್ತಿತ್ವ ದಿ. ಶ್ರೀ ಐ.ಎಂ ಜಯರಾಮ ಶೆಟ್ಟಿಯವರದ್ದು.

ದಿ. ಶ್ರೀ ಕೆ.ಪಿ. ರಾಮಣ್ಣ ಶೆಟ್ಟಿಯವರ ಉದಾರತೆ ಹಾಗೂ ದಿ. ಕೆ. ಶ್ರೀನಿವಾಸ ಆಳ್ವರ ಮುಂದಾಳತ್ವದಲ್ಲಿ ಸಂಘದ ಸಂಕೀರ್ಣದಲ್ಲಿ ಆರಂಭಗೊಂಡ ರಾಮಕೃಷ್ಣ ವಿದ್ಯಾನಿಕೇತನ ಶಾಲೆ 10–20 ಮಕ್ಕಳನ್ನೊಳಗೊಂಡ ಚಿಕ್ಕ ಶಾಲೆಯಾಗಿತ್ತು. ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದ ಶಾಲಾ ಕಟ್ಟಡ ನಿರ್ಮಾಣ ಯೋಜನೆಯನ್ನು ಕೈಗೆತ್ತಿಗೊಂಡು ಹಲವು ಅಡೆ–ತಡೆಗಳ ಮಧ್ಯೆಯೂ ದಾನಿಗಳ ಸಹಕಾರದಿಂದ ಕೇವಲ 90 ದಿನಗಳಲ್ಲಿ ಸುಸಜ್ಜಿತ ಶಾಲಾ ಕಟ್ಟಡವನ್ನು ನಿರ್ಮಿಸಿ ಹೊಸ ಇತಿಹಾಸ ನಿರ್ಮಿಸಿದ ಬಂಟ ನಾಯಕ ಇವರು. ಈ ಯೋಜನೆಗೆ ಉದಾರ ದೇಣಿಗೆ ನೀಡಿದ ದಿ. ಡಾ. ಆರ್.ಎನ್. ಶೆಟ್ಟಿಯವರ ಅಭಿಮಾನಕ್ಕೆ ಪ್ರತಿಯಾಗಿ ಶಾಲೆಗೆ ದಾನಿಗಳ ಹೆಸರನ್ನಿಟ್ಟು ಔದಾರ್ಯ ಮೆರೆದವರು ದಿ. ಶ್ರೀ ಐ.ಎಂ. ಜಯರಾಮ ಶೆಟ್ಟಿಯವರು. ಜೊತೆಗೆ ಶಾಲೆಗೆ ಐ.ಸಿ.ಎಸ್.ಇ ಪಠ್ಯಕ್ರಮಕ್ಕೆ ಅನುಮತಿ ಪಡೆಯುವಲ್ಲಿ ಶ್ರಮವಹಿಸಿ ಯಶಸ್ವಿಗೊಂಡ ಶ್ರೀ ಜಯರಾಮ ಶೆಟ್ಟಿಯವರ ದೂರದೃಷ್ಟಿತ್ವದಿಂದಾಗಿ ಶಾಲೆ ವ್ಯವಸ್ಥಿತವಾಗಿ ನಡೆಯಲು ತಜ್ಞರನ್ನೊಳಗೊಂಡ ಶಾಲಾಡಳಿತ ಮಂಡಳಿ ರಚನೆಯಾಯಿತು.

ದಿ. ಶ್ರೀ ಐ.ಎಂ. ಜಯರಾಮ ಶೆಟ್ಟಿಯವರ ಮಹತ್ಕಾರ್ಯದಿಂದ ಇಂದು ನಮ್ಮ ಶಾಲೆ ಸುತ್ತಮುತ್ತಲಿನ ಪರಿಸರದಲ್ಲಿ ಅತ್ಯುತ್ತಮ ಹೆಸರುಗಳಿಸಿದ್ದು, ಪ್ರತಿಷ್ಠಿತ ಸಂಸ್ಥೆಯಾಗಿ ರೂಪುಗೊಂಡು ಸುಮಾರು 4000ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾರ್ಜನೆ ಪಡೆಯುತ್ತಿದ್ದಾರೆ.

ಸಂಘ ಹಾಗೂ ಸಂಘದ ವಿದ್ಯಾಸಂಸ್ಥೆಗೆ ಹೊಸ ರೂಪವನ್ನು ನೀಡಿದ ದಿ. ಶ್ರೀ ಐ.ಎಂ. ಜಯರಾಮ ಶೆಟ್ಟಿಯವರ ಹೆಸರನ್ನು ಸ್ಮರಣೀಯವಾಗಿಸುವ ನಿಟ್ಟಿನಲ್ಲಿ ಅವರ ಗೌರವಾರ್ಥ ಮಹಾಸಭೆಯ ನಿರ್ದೇಶನದಂತೆ, ನಮ್ಮ ಕಾರ್ಯಕಾರಿ ಸಮಿತಿಯಲ್ಲಿ ತೀರ್ಮಾನಿಸಿ ಶಾಲೆಯ ಕಟ್ಟಡಕ್ಕೆ "ಶ್ರೀ ಐ.ಎಂ. ಜಯರಾಮ ಶೆಟ್ಟಿ ಬ್ಲಾಕ್" ಎಂದು ಹೆಸರಿಡಲಾಗಿದೆ.

## ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಸಾಂಸ್ಕೃತಿಕ ಮತ್ತು ಕ್ರೀಡಾ ದಿನಾಚರಣೆ








ಜನವರಿ 26, 2021ರಂದು ಸಂಸ್ಥಾಪಕರ ದಿನಾಚರಣೆ ಅಂಗವಾಗಿ ನಮ್ಮ ಸಂಘದ ವಿಜಯನಗರ ಸಂಕೀರ್ಣದ ಸ್ಥಳ ದಾನಿಗಳಾದ ದಿ। ಹೆಚ್. ತಿಮ್ಮಪ್ಪ ಭಂಡಾರಿಯವರ ಹಾಗೂ ದಿ. ಮೂಲ್ಕಿ ಸುಂದರರಾಮ ಶೆಟ್ಟಿಯವರ ಮತ್ತು ದಿ. ಶ್ರೀನಿವಾಸ ಆಳ್ವರವರ ಪುಥಳಿಗೆ ಹಾರಾರ್ಪಣೆ ಮಾಡಲಾಯಿತು. ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಇತರ ಸದಸ್ಯರು ಈ ಸಮಾರಂಭದಲ್ಲಿ ಉಪಸ್ಥಿತಿದ್ದರು.

## ಅಭಿನಂದನೆಗಳು



ಕರ್ನಾಟಕ ಒಲಿಂಪಿಕ್ ಭವನದಲ್ಲಿ Hall of Fame ಉದ್ಘಾಟನಾ ಸಮಾರಂಭದಲ್ಲಿ ಮಾನ್ಯ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪನವರಿಂದ ಒಲಿಂಪಿಕ್ ಸಂಸ್ಥೆ ಉಪಾಧ್ಯಕ್ಷರಾದ **ಶ್ರೀ ದರ್ಬೆ ಚಂದ್ರಹಾಸ ರೈಯವರಿಗೆ** ಅಭಿನಂದನೆ.

## ಅಭಿನಂದನೆಗಳು



ಮುಂಬೈ ಬಂಟರ ಸಂಘದ ಅಧ್ಯಕ್ಷರಾಗಿ **ಶ್ರೀ ಚಂದ್ರಹಾಸ ಶೆಟ್ಟಿಯವರು** ಆಯ್ಕೆಯಾಗಿರುತ್ತಾರೆ. ಶ್ರೀಯುತರು ಮುಂಬಯಿಯ ಪ್ರಖ್ಯಾತ ಹೊಟೇಲ್ ಉದ್ಯಮಿ ಹಾಗೂ ಮುಂಬೈನ "AHAR" (ಹೋಟೆಲ್ ಮತ್ತು ರೆಸ್ಟೋರೆಂಟ್ ಅಸೋಸಿಯೇಷನ್, ಮುಂಬೈ) ಇದರ ಮಾಜಿ ಅಧ್ಯಕ್ಷರು. ಇವರಿಗೆ ಬಂಟರ ಸಂಘದ ಪರವಾಗಿ ಅಭಿನಂದನೆಗಳು.

# ಮಹಿಳಾ ವಿಭಾಗ–ದಸರಾ ಆಚರಣೆ



ಕಳೆದ ಐದಾರು ತಿಂಗಳಿನಿಂದ ಕೋವಿಡ್–19ನ ಹಾವಳಿಯಿಂದ ಯಾವುದೇ ಕಾರ್ಯಕ್ರಮಗಳಿಗೆ ಅವಕಾಶವಿರಲಿಲ್ಲ. ದಿನಾಂಕ 22.10.2020ರ ಗುರುವಾರ ಮಧ್ಯಾಹ್ನ 3.00 ಗಂಟೆಗೆ ಬಂಟರ ಸಂಘದ ವತಿಯಿಂದ ಉದ್ಘಾಟನೆಗೊಂಡ "ಇರ್ಮಾಡಿ ಜಯಪ್ರಕಾಶ್ ಶೆಟ್ಟಿ" ಬಂಟ್ಸ್ ಹಾಸ್ಟೆಲ್‌ನಲ್ಲಿ ಮಹಿಳಾ ವಿಭಾಗದ ವತಿಯಿಂದ ಈ ಬಾರಿ ದಸರಾ ಆಚರಣೆಯನ್ನು ಸರಳವಾಗಿ ಹಾಗೂ ಸಾಂಕೇತಿಕವಾಗಿ ಆಚರಿಸಿದೆವು.

ತಾಯಿ ಚಾಮುಂಡೇಶ್ವರಿಯ ಪೀಠವನ್ನು ಸುಂದರವಾಗಿ ವಿನ್ಯಾಸಗೊಳಿಸಲು ಶ್ರೀಮತಿ ಮಲ್ಲಿಕಾ ಕೆ. ಶೆಟ್ಟಿಯವರಿಗೆ ಸಹಕರಿಸಿದ ಶ್ರೀ ಪ್ರವೀಣ್ ಹಾಗೂ ಮಹಿಳಾ ವಿಭಾಗದ ಸದಸ್ಯೆ ಶ್ರೀಮತಿ ವಿಜಯಲಕ್ಷ್ಮೀ ಶಾಂತಾರಾಮ್‌ರವರಿಗೆ ಅಭಾರಿಯಾಗಿದ್ದೇನೆ. ಹೂವುಗಳಿಂದ ಅಲಂಕೃತಗೊಂಡ ಮಂಟಪವನ್ನು ರವಿಯವರು ಸುಂದರವಾಗಿ ನಿರ್ಮಿಸಿದ್ದರು. ಹೂವಿನ ರಂಗೋಲಿಯನ್ನು ಶ್ರೀಮತಿ ಮಾಲಾ ಶೆಟ್ಟಿಯವರು ಸುಂದರವಾಗಿ ವಿನ್ಯಾಸಗೊಳಿಸಿದರು.

ಮೊತ್ತ ಮೊದಲಿಗೆ ಶ್ರೀಮತಿ ಮಾಲಾ ಭಾಸ್ಕರ ಶೆಟ್ಟಿ ಹಾಗೂ ಶ್ರೀಮತಿ ಆಶಾ ಶೆಟ್ಟಿ ಮತ್ತು ಮಹಿಳಾ ವಿಭಾಗದ ಸದಸ್ಯೆಯರ ಜೊತೆ ಸಂಘದ ಸದಸ್ಯೆಯರು ಕೂಡಿಕೊಂಡು ಸುಶ್ರಾವ್ಯವಾಗಿ ಲಲಿತ ಸಹಸ್ರನಾಮ ಹಾಗೂ ಭಜನಾ ಕಾರ್ಯಕ್ರಮ ನಡೆಸಿಕೊಟ್ಟರು. ಮಹಿಳಾ ವಿಭಾಗದ ವತಿಯಿಂದ ಪ್ರಸಾದ ವಿತರಣೆಯ ಜೊತೆಗೆ ಶ್ರೀಮತಿ ಸುಜಯ ಜಯಪ್ರಸಾದ್ ಶೆಟ್ಟಿಯವರ ವತಿಯಿಂದ ಬಂದ ಪ್ರಸಾದವನ್ನು ಮಹಿಳಾ ವಸತಿ ಗೃಹದ ಶ್ರೀಮತಿ ಸುಜಾತ ಶೆಟ್ಟಿ ಮತ್ತು ಅರುಣರವರು ತಯಾರಿಸಿಕೊಟ್ಟರು. ಪ್ರಸಾದ ವಿತರಣೆಯ ಬಳಿಕ ಸೇರಿದ ಮಹಿಳೆಯರು ದಾಂಡಿಯ ನೃತ್ಯದ ಮೂಲಕ ನರ್ತಿಸಿ ಸಂಭ್ರಮ ಪಟ್ಟರು. ಹಲವು ದಿನಗಳ ನಿರ್ಬಂಧದ ನಂತರ ನಡೆದ ಈ ಕಾರ್ಯಕ್ರಮವು ಮಹಿಳೆಯರಿಗೆ ಉತ್ಸಾಹವನ್ನು ತಂದುಕೊಟ್ಟಿರುವುದರಲ್ಲಿ ಸಂದೇಹವೇ ಇಲ್ಲ.

**ಜಯಶ್ರೀ ಸಿ. ರೈ**
ಚೇರ್‌ಪರ್ಸನ್, ಮಹಿಳಾ ವಿಭಾಗ

# ಬಂಟರ ಸಂಘ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ 21ನೇ ವಾರ್ಷಿಕೋತ್ಸವ ಸಮಾರಂಭ




ಬಂಟರ ಸಂಘ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ ಪ್ರಾಂಗಣದಲ್ಲಿ 21ನೇ ವಾರ್ಷಿಕೋತ್ಸವವನ್ನು ದಿನಾಂಕ 19.01.2021ನೇ ಮಂಗಳವಾರದಂದು ಸರಳವಾಗಿ ಆಚರಿಸಲಾಯಿತು.

ಪೂರ್ವಾಹ್ನ 8.00 ಗಂಟೆಗೆ ಫಲ ಪಂಚಾಮೃತ ಅಭಿಷೇಕ, ಗಣಹೋಮ ಇತ್ಯಾದಿ ಪೂಜಾ ಕಾರ್ಯಕ್ರಮಗಳೊಂದಿಗೆ ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು, ಗೌರವ ಕಾರ್ಯದರ್ಶಿ ಶ್ರೀ ಮಧುಕರ ಎಂ. ಶೆಟ್ಟಿಯವರು ಹಾಗೂ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಮೆನ್ ಶ್ರೀ ರಾಜೇಶ್ ಶೆಟ್ಟಿ ಕುತ್ಯಾರು ಇವರ ಪೂಜಾ ದೀಕ್ಷೆಯೊಂದಿಗೆ ಗಣಹೋಮವನ್ನು ನಡೆಸಲಾಯಿತು. ಕಾರ್ಯಕ್ರಮದಲ್ಲಿ ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಪ್ರಾರ್ಥನಾ ಮಂದಿರ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

---



ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿಯವರು ಚೇರ್‌ಪರ್ಸನ್‌ರಾಗಿರುವ ಸಾಂಸ್ಕೃತಿಕ ಸಮಿತಿಯವರಿಂದ "ಬಂಟ್ಸ್ ಟಿವಿ" ಎಂಬ ಯೂಟ್ಯೂಬ್ ಚಾನೆಲ್ ಪ್ರಾರಂಭವಾಯಿತು. ಇದರ ಉದ್ಘಾಟನೆಯು ಶ್ರೀ ಶಶಿಧರ ಅಡಪರವರಿಂದ ನೆರವೇರಿತು. ಸಂಘದ ಅನೇಕ ಕಾರ್ಯಕ್ರಮಗಳು, ವೆಬಿನಾರ್‌ಗಳು ಇದರ ಮುಖಾಂತರ ಪ್ರಸಾರವಾಗುತ್ತಿವೆ. ಕಾರ್ಯಕ್ರಮದಲ್ಲಿ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸಾಂಸ್ಕೃತಿಕ ಸಮಿತಿಯ ಸದಸ್ಯರು ಭಾಗವಹಿಸಿದ್ದರು.

---

